ಕೊರವಂಜಿ



ಜೂನ್ ೧೯೪೩

ಮಾಸ ಪತ್ರಿಕೆ

ಸಂಪಾದಕರು :
ಶಿ॥ ರಾ. ಶಿ.

ಚಿತ್ರಕಾರರು :
ಶ್ರೀ॥ ಆರ್. ಕೆ. ಲಕ್ಷ್ಮಣ್

ಬರಹಗಾರರು :

ಶ್ರೀ॥ ನಾ. ಕ.
ಶ್ರೀ॥ ಎ. ಕೇ.
ಶ್ರೀ॥ ಬಿ. ಎಲ್. ಅಖಿಲಾ
ಶ್ರೀ॥ ಬಿ. ಜಿ. ಕುಲಕರ್ಣಿ
ಶ್ರೀ॥ ಚಿತ್ರಕವಿ
ಶ್ರೀ॥ ಪತ್ರಾಚಾರಿ
ಶ್ರೀ॥ ಶರತ್
ಶ್ರೀ॥ ಬೀರಣ್ಣ

ಬಿಡಿ ಪತ್ರಿಕೆ -- ಕೇವಲ ಎರಡಾಣೆ

ಶಿ॥ ನಗೆಯ ಮಾಸ ಪತ್ರಿಕೆ.

ಕೊರವಂಜಿ

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು.


ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೨—೦—೦

ಬಿಡಿ ಪ್ರತಿ ಕೇವಲ ಆಣೆ ೦—೨—೦


ವಿಷಯಾನುಕ್ರಮಣಿಕೆ



ಜ ಬ್ ಕೊ

ಶಾಯಿಯನ್ನು

ಉಪಯೋಗಿಸಬಾರದೇ ?



ಸಂಪುಟ ೨] ಕೊರವಂಜಿ—ಜೂನ್ ೧೯೪೩ [ಸಂಚಿಕೆ ೩

ಕು ಹ ಕಿ ಡಿ ಗ ಳು

ಜಪಾನೀಯರು ನಮ್ಮ ದೇಶ ಆಕ್ರಮಣ ಮಾಡಿದರೆ ನೀವೇನು ಮಾಡುತ್ತೀರಿ ಎಂದು ಆಂಗ್ಲ ಪತ್ರಿಕೆಯೊಂದು ನಮಗೆ ಸವಾಲು ಹಾಕಿದೆ.

—ನಾವೇನು ನಿರಸ್ತ್ರರೇ? ಹಾರ್ಮೋನಿಯಂ ಹಿಡಿದು ನಿಲ್ಲುತ್ತೇವೆ.

* *

'ಒಂದು ಬಸ್ಸಿನಲ್ಲಿ ಎಷ್ಟು ಜನ ಕೂರಬಹುದು' ಎಂದು ನಮ್ಮ ಬಾತ್ಮೀದಾರರ ಪ್ರಶ್ನೆ.

—ಕೊನೆ ಮೊದಲಿಲ್ಲದೆ ಕೂಡಬಹುದು ಎಂದು ಕಂಡಕ್ಟರಿನ ಅಭಿಪ್ರಾಯ.

* *

"ಇನ್ನು ಮೇಲೆ ಸಂಪಾದನೆಯಲ್ಲಿ ಅರ್ಧ ತೆರಿಗೆಗೆ ಕೊಡಬೇಕು" ಎಂದು ಸಹ ಪತ್ರಿಕೆಯ ಶಿರೋನಾಮೆ.

—ಸಹ ಪತ್ರಿಕೆಯವರು ಆಶಾವಾದಿಗಳು.

* *

"ಜ್ಯೋತಿಷ್ಯರೆಲ್ಲಾ ಈಗ ಏನಾದರು?—ಪತ್ರಿಕೆಗಳಲ್ಲಿ ಜಾಹೀರಾತು ಕೂಡ ಮಾಡುವುದಿಲ್ಲ" ಎಂಬ ಪ್ರಶ್ನೆ—

—ಅಯ್ಯೋ ಗೊತ್ತಿಲ್ಲವೇ?—ಈಗ ಅವರೆಲ್ಲರೂ ಯುದ್ಧ ಭವಿಷ್ಯ ಬರೆಯುತ್ತಿದ್ದಾರೆ. ಅದಕ್ಕೆ ಅನಿರೀಕ್ಷಿತ ಸುದ್ದಿಗಳು.

* *

ಪುಂಡು ತೆರಿಗೆಯ ಕಾನೂನು ಬಹುಮತದಿಂದ ಬಿದ್ದು ಹೋಯಿತಂತೆ.

—ಒಂದು ಕಾನೂನು ಬಿದ್ದರೇನು? ಅದೇ ಕೆಲಸವನ್ನು ಸಾಧಿಸಲು ಹಲವಾರು ಕಾನೂನುಗಳಿರುವಾಗ—

ಕೇಂದ್ರ ಸರಕಾರಕ್ಕೆ ಹಿಂದೂ ಮುಸಲ್ಮಾನ ಸೌಹಾರ್ದ್ರವೇ ಪ್ರಾಮುಖ್ಯವಂತೆ

—ಅಂತೇ ಮಹಾತ್ಮರಿಗೆ ಆಗ ಖಾನರ ಅರಮನೆಯಲ್ಲಿ ಬಿಡಾರ.

*　　　　*

ಅಮೇರಿಕನರು ಕೂಡ ಕನ್ನಡವನ್ನು ಕಲಿಯುತ್ತಿದ್ದಾರಂತೆ.

—ಹೌದು ಮೊನ್ನೆ ಜಪಾನೀಯರನ್ನು ಅಟ್ಟು ದ್ವೀಪದಲ್ಲಿ ಅಟ್ಟಿದರಲ್ಲವೇ ?

*　　　　*

ಅಧಿಕಾರಿಗಳೊಬ್ಬರು ಹೊಸ ಹಲ್ಲುಗಳನ್ನು ಕಟ್ಟಿಸಿಕೊಂಡರಂತೆ,

—ಅಂದರೆ, ವರಮಾನ ತೆರಿಗೆಯು ಅಧಿಕಾರಿಗಳನ್ನಾಗಿ ನೇಮಿಸುತ್ತಾರೆಯೇ ?

*　　　　*

ಇಟಲಿಯ ಪ್ರಧಾನ ನಗರಿಯ ಮೇಲೆ ಮಿತ್ರ ಪಕ್ಷದವರು ಸುಮಾರು ಬಾಂಬು ಸುರಿಸಿದರಂತೆ.

—ತತ್ಫಲವಾಗಿ ಈಗ ಮನೆಗೂ ಸುಲಭ ಬಾಡಿಗೆಗೆ ದೊರೆಯುತ್ತವಂತೆ.

*　　　　*

ಪುರಂದರ ದಾಸರ ನವೀನ ಹಾಡು.

ಏನ ಬೇಡಲಿ ನಿನ್ನ ಬಳಿಗೆ ಬಂದು ।
ನೀನಿತ್ತ ಸೌಭಾಗ್ಯ ನಿಬಿಡವಾಗಿರಲಿಕ್ಕೆ ॥
ಅಶನವನು ಕೇಳಿದರೆ ಅಕ್ಕುಳ್ಳಿ ತಂದಿಡುವೆ ।
ಬಟ್ಟೆಯನು ಕೇಳಿದೊಡೆ ಹೊಟ್ಟೆ ಮೇಲೆ ಹೊಡೆಯುವೆ ॥
ಮನೆಯನ್ನು ಕೇಳಿದರೆ ಸೆರೆಮನೆಯ ತೋರುವೆ ।
ಮಕ್ಕಳನು ಪಡೆದರೆ ಸಮರಕ್ಕೆ ಸೆಳೆದೊಯ್ವೆ ॥

*　　　　*

ನೆರೆ ಮನೆಯವನ ಹುಟ್ಟಿದ ಹಬ್ಬದ ಸಲುವಾಗಿ ಅವನ ನಾಯಿಯ ಕೊರಳಿಗೆ ಬಲು ಅಂದವಾದ ಸರಪಳಿಯೊಂದನ್ನು ಹಾಕಿದನಂತೆ.

—ನಾಯಿಯು ಹಿಗ್ಗಿದ್ದೂ ಹಿಗ್ಗಿದ್ದೇ !

*　　　　*

ಮೈಸೂರು ದೇಶದಲ್ಲಿ ತೋಳಗಳಿವೆಯೇ ಎಂಬ ಪ್ರಶ್ನೆ,

—ಕಾಡುಗಳಲ್ಲಿ ಖಂಡಿತವಾಗಿಯೂ ಇಲ್ಲ.

*　　　　*

ನೋಟುಗಳನ್ನು ಮುದ್ರಿಸುವ ಕಾರಣದಿಂದ ಈಗ ಕಾಗದದ ಅಭಾವ ಎಂಬ ಸುದ್ದಿಯು ನಿರಾಧಾರವಾದುದೆಂದು ತಿಳಿಯಬಂದಿದೆ.

*　　　　*

ಹುರಿಗಾಳು

"ಏನೋ ಇದು, ರಾಮೂ! ಒಂದು ಕೋಟಿಗೆ ಮೂವತ್ತು ರೂಪಾಯಿ ಖರ್ಚು ಮಾಡಿದೀಯಲ್ಲೋ........"

"ಏನು ಮಾಡೋದಣ್ಣಾ, ಅಷ್ಟೇ ಇದ್ದದ್ದು ಬಾಕಿ, ನನ್ನ ಹತ್ತಿರ ಹಣ........ ನೀನು ಕಳಿಸಿದ್ದರಲ್ಲಿ"

* * *


ನಾನು ನೋಡಿ, ಸಣ್ಣ ಪುಟ್ಟ ನೆಗಡಿ, ತಲೆನೋವು ಬಂದರೂವೇ ತಕ್ಷಣ ಡಾಕ್ಟರನ್ನೇ ಕರೆಸಿಬಿಡುತ್ತೇನೆ........ಯಾಕೆ ಗೊತ್ತೇ—ಡಾಕ್ಟರುಗಳೂ ಪಾಪ, ಬದುಕಬೇಡವೇ!

ಸರಿ!........ಆ ಮೇಲೆ, ಅವರು ಕೊಡೋ ಔಷಧೀನ, ಕಿಟಕಿ ಆಚೆ ಸುರಿದು ಬಿಡುತ್ತೇನೆ........ಯಾಕೆ ಗೊತ್ತೆ?—ನಾವೂ ಬದುಕಬೇಡವೇ?

* * *

"ನಾನು ಅಪರಿಚಿತರ ಹತ್ತಿರ ಬಹು ಸಲೀಸಾಗಿ ಮಾತನಾಡುತ್ತೇನೆ," ಅಂತ ಆತ ಹೆಮ್ಮೆ ಪಟ್ಟರೆ, "ಹೌದು! ಪರಿಚಿತರೊಬ್ಬರೂ ನಿನ್ನ ಹತ್ತಿರ ಮಾತೇ ಆಡುವುದಿಲ್ಲ" ಅಂತ ಈತ ಹೇಳಿದರಂತೆ!

* * *



"ಹೈದರಾಲಿ ಮರಣ ಹೊಂದಿದ್ದು ಯಾವ ಕದನದಲ್ಲಿ?" ಎಂಬ ಪ್ರಶ್ನೆಗೆ ಒಬ್ಬ ಹುಡುಗ, "ಅವನ ಕಡೆಯ ಕದನದಲ್ಲಿ" ಎಂದು ಉತ್ತರ ಹೇಳಿದನಂತೆ!

"ನಾನು ಹಾರ್ಮೋನಿಯಂ ಇಟ್ಟುಕೊಂಡು ಹಾಡೋದಕ್ಕೆ ಕೂತ್ರೆ ಅಂದ್ರೆ, ನೀವು ಮುಂದಿನ ಬಾಗಿಲು ತೆಕ್ಕೊಂಡು ರಸ್ತೆ ನೋಡ್ತಾ ನಿಂತ್ಕೋತೀರಲ್ಲಾ ನ್ಯಾಯವೇ?" ಅಂತ ಆಕೆ ಕಣ್ಣಲ್ಲಿ ನೀರು ತಂದಳು. "ಇಲ್ಲಕಣೆ, ಅಕ್ಕಪಕ್ಕದ ಮನೆಯವರು ನಾನು ನಿನ್ನನ್ನ ಹೊಡೀತೀನಿ, ಬಡೀತೀನಿ, ಅಂತ ತಿಳ್ಕೋಳ್ದೇ ಇರಲೀಂತಾ, ಕಣೇ" ಅಂತ ಆತ ಕಣ್ಣೊರಸಿದ.

* * *

ಭಾಗವತರ ಮಗ ಪೋಲೀಸ್ ಸಬ್ ಇನ್ಸ್ಪೆಕ್ಟರ್ ಕೆಲಸಕ್ಕೆ ಅರ್ಜಿ ಹಾಕಿದ. ಎದುರಿಗೆ ಕರೆಸಿ ಪ್ರಶ್ನೆಗಳನ್ನು ಕೇಳಿದರು. "ದೊಂಬಿ ಚೆದುರಿಸಲು ಉಪಾಯ ವೇನು?" ಅಂದರು. "ಪೋಲೀಸಲ್ಲಿ ನೀವು ಏನು ಮಾಡುತ್ತೀರೋ ಗೊತ್ತಿಲ್ಲ. ಅಂತೂ, ನನ್ನ ಅನುಭವ ಹೇಳ್ತೀನೆ—ತಟ್ಟೆ ತಗೊಂಡು ಒಂದು ಸುತ್ತು ಹೊರಟಾ ಅಂದರೆ. ಎಂಥಾ ದೊಂಬೀನೂ ಕರಗಿಹೋಗುತ್ತೆ" ಅಂದ, ಭಾಗವತರ ಮಗ.

* * *



"ಏನಯ್ಯಾ, ನಾಲ್ಕು ದಿನದಿಂದ ಯಾಕೆ ಬರಲಿಲ್ಲ, ಆಫೀಸಿಗೆ?"

"ಜ್ವರ, ಸಾರ್!"

"ಡಾಕ್ಟರ್ ಸರ್ಟಿಫಿಕೇಟ್ ತಂದಿ ದೀಯಾ?"

"ಸರ್ಟಿಫಿಕೇಟ್ ಯಾಕೆ ಸಾರ್? —ನನಗೆ, ನಿಜವಾಗಿಯೂ ಜ್ವರ ಬಂದಿತ್ತು, ಸಾರ್!"

* * *

ಜೀವನ ನಾಟಕದಲ್ಲಿ ಬರುವ ನಾಟಕದ ದೃಶ್ಯಗಳನ್ನು ಕುರಿತು ಕಟುವಾಗಿ ಟೀಕಿಸಿದವರೊಬ್ಬರಿಗೆ, ಆ ಚಿತ್ರದ ಪ್ರೋತ್ಸಾಹಕರೊಬ್ಬರು, "ವಿನೋದ ರತ್ನಾಕರರ ನಾಟಕಗಳಲ್ಲಿ ಅವುಗಳಿಗಿಂತ ಉತ್ತಮವಾದ ದೃಶ್ಯಗಳಿದ್ದರೆ ದಯವಿಟ್ಟು ತಿಳಿಸಿ" ಎಂದು ಸವಾಲ್ ಹಾಕಿದರಂತೆ.

ಈಗಿನ ಬ್ಯಾಂಕುಗಳು

ಸಾಮಾನ್ಯವಾಗಿ ಎಲ್ಲರಿಗೂ ಶನಿವಾರ ಸಾಯಂಕಾಲವೇ ಅಪಘಾತಗಳು ಆಗುವುದು ಹೋದ ಶನಿವಾರ ನನಗಾದ ಅಪಘಾತವನ್ನು ಹೇಳುತ್ತೇನೆ. ಆ ದಿನ ರಾತ್ರಿ ಕಬ್ಬನ್ ಭವನದ ಫಲಾಹಾರಾಶ್ರಮದಲ್ಲಿ ಊಟಕ್ಕೆಂದು ನನ್ನನ್ನು ಹಲವರು ಕರೆದಿದ್ದರು. ಯಾರೋ ದೊಡ್ಡ ಮನುಷ್ಯರು ಬೆಂಗಳೂರಿಗೆ ಬಂದಿದ್ದರೆಂದೂ, ಆತನು ಯುದ್ಧೋದ್ಯಮದಲ್ಲಿ ಸಾಹಸಿಯೆಂದೂ ಆತನ ಮರ್ಯಾದಾರ್ಥವಾಗಿ ಈ ಭೋಜನ ಕೂಟವೆಂದೂ, ನಾನೂ ಬರಬೇಕೆಂದೂ ಆಹ್ವಾನವಿತ್ತು. ಆಹಾರ ಅಧಿಕಾರಿಗಳ ಗುಮಾಸ್ತೆಗೆ ಸಲಾಮು ಹಾಕದೆ ಅನ್ನ ಸಿಗುವ ಸಂದರ್ಭವನ್ನು ಕಳೆದುಕೊಳ್ಳುತ್ತಾರೆಯೇ?—ಭೋಜನ ಕೂಟಕ್ಕೆ ಇಳಿದೆ. ರಸಗವಳ, ಅದನ್ನು ನೆನೆಸಿಕೊಂಡರೆ, ಹೊಟ್ಟೆ ಇನ್ನೂ ಹಿಂಡುತ್ತೆ. ಇನ್ನೇನು ಊಟ ಮುಗಿಯಿತು. ಲಕ್ಷಣವಾದ ಊಟವನ್ನು ಹಾಳು ಮಾಡಲೋಸುಗ ಹಲವರು ಉಪನ್ಯಾಸ ವಂದನಾರ್ಪಣೆ ಪರಸ್ಪರ ಹೊಗಳುವಿಕೆ ಇವುಗಳನ್ನು ಮಾಡುತ್ತಾರಲ್ಲಾ, ಈ ಭಾಷಣಗಳು ಶುರುವಾಗುವ ಮೊದಲೇ ಹೊರಟುಬಿಡೋಣವೆಂದು ಆಜೂಬಾಜು ನೋಡಿದೆ. ಅಷ್ಟರಲ್ಲೇ ಮಾನ್ಯ ಅತಿಥಿಗಳು ಎದ್ದೇ ಎದ್ದರು. ನಿಂತೇ ಬಿಟ್ಟರು, ಭಾಷಣ ಶುರು ಮಾಡಿಯೇ ಮಾಡಿದರು. ದೀರ್ಘವಾಗಿ ಭಾಷಣ ಮಾಡಲಿಲ್ಲ. ಆದರೆ, ಒಂದೇ ಮಾತಿನಲ್ಲಿ ಉಂಡ ಅನ್ನ ಭಸ್ಮ ಆಗುವ ಹಾಗೆ ಭಯ ಹುಟ್ಟಿಸಿದರು. ಅವರಂದುದು ಇಷ್ಟೇ "ಮಹನೀಯರೇ, ನೀವೆಲ್ಲರೂ ಇಂದು ಯುದ್ಧೋದ್ಯಮಕ್ಕೆ ನಾನು ಸಹಾಯ ಮಾಡಿದುದಕ್ಕಾಗಿ ಗೌರವಿಸಲೋಸುಗ ಈ ಕೂಟವನ್ನೇರ್ಪಡಿಸಿದ್ದೀರಿ. ರಸದೂಟವನ್ನು ಬೇಸರ ಭಾಷಣದಿಂದ ಮುಕ್ತಾಯಗೊಳಿಸುವ ಬದಲು, ಯುದ್ಧೋದ್ಯಮಕ್ಕಾಗಿ ನಿಮ್ಮಗಳಿಂದ ಚಂದಾ ಎತ್ತುತ್ತೇನೆ. ಮಿತಿಮೀರಿ ಸಹಾಯ ಮಾಡಿದರೆ ಈ ಕೂಟವು ಸಾರ್ಥಕವಾದಂತೆ'' ಎಂದು ಹೇಳಿ ಕುಳಿತೇ ಬಿಟ್ಟರು. ಕೂಟಕ್ಕೆ ಬಂದವರ ಒಬ್ಬೊಬ್ಬರ ಮುಖವೂ ಒಂದೊಂದು ಚಿತ್ರವಾಯ್ತು. ಅನ್ನದ ಮೇಲೆ ಆಶೆಪಟ್ಟು, ಗಂಟನ್ನೇ ಕಳೆದುಕೊಳ್ಳುವ ಹಾಗಾಯಿತಲ್ಲ, ಎಂಬ ರೋದನ ವದನವು ಎಲ್ಲೆಲ್ಲೂ ಪ್ರತ್ಯಕ್ಷವಾಯಿತು.

ಮಾನ್ಯ ಅತಿಥಿಗಳು ಒಬ್ಬೊಬ್ಬರ ಬಳಿಗೂ ಬಂದರು. ನಿಮ್ಮ ಕೈಲಾದ್ದನ್ನು ಕೊಡಿ ಎಂದು ಬೇಡಿದರು. ಮೊದಲು ಸಿಕ್ಕಿದವನು ಐದು ರೂಪಾಯಿ ಕೊಟ್ಟ. ಇನ್ನೊಬ್ಬರು ಹಣವಿಲ್ಲವೆಂದು ಒಂದು ಉಂಗುರವನ್ನೇ ಕೊಟ್ಟರು. ಮೂರನೆಯವರು ತಮ್ಮ ವಿಸಿಟಿಂಗ್ ಕಾರ್ಡ್ ಕೊಟ್ಟು ನಾಳೆ ಹತ್ತು ರೂಪಾಯಿ ಕಳುಹಿಸುತ್ತೇನೆ ಎಂದರು. ಆ ವೇಳೆಗೆ ನನ್ನ ಹತ್ತಿರ ಬಂದರು, ಮಾನ್ಯ ಅತಿಥಿಗಳು.

"ಸ್ವಾಮಿ, ನನ್ನಲ್ಲಿ ಬಿಡಿ ಹಣವಿಲ್ಲ. ಬರೆಯಲು ಬ್ಯಾಂಕಿನ ಚೆಕ್ಕು ಕೂಡಾ ಇಲ್ಲ. ನಾಳೆ ನಿಮ್ಮ ಭೇಟಿ ತೆಗೆದುಕೊಳ್ಳುತ್ತೇನೆ."


ಆಹಾ ಹಾಗಾಗದು, ನಾಳೆ ಕೊಡುವುದು ನಾಳೆ ಲೆಕ್ಕ, ಇವತ್ತು ಊಟದ ನೆನಪಿಗೆ ಏನಾದರೂ ಕೊಡಬೇಕು ಎಂದು ಬಾಯಿ ಬಾಯಿ ಬಿಟ್ಟರು.

* *

"ಏನು ಮಾಡಲಿ, ಮೊದಲೇ ತಿಳಿದಿದ್ದರೆ ಸಿದ್ಧನಾಗಿ ಬರುತ್ತಿದ್ದೆ" ಎಂದೆ.

"ಮೊದಲೇ ತಿಳಿದಿದ್ದರೆ ನಿಮ್ಮ ಪರಿಚಯವೇ ಆಗುತ್ತಿರಲಿಲ್ಲವೇನೋ, ಈಗಲೂ ತಾವು ನಿಮ್ಮ ಬ್ಯಾಂಕಿಗೆ ಈ ಕಾಗದದ ಮೇಲೆ ಒಂದು ಚೆಕ್ಕು ಬರೆದು ಕೊಡಿ" ಎಂದು ಆ ದಿನದ ಆಮಂತ್ರಣದ ಕಾಗದವನ್ನು ನನ್ನ ಕೈಗೆ ಕೊಟ್ಟರು, ಹಾಗೂ ತಮ್ಮ ಜೇಬಿನಿಂದ ಫೌಂಟೇನ್‌ಪೆನ್ನನ್ನೂ ತೆಗೆದುಕೊಟ್ಟರು.

ಇನ್ನೇನು ಮಾಡುವುದು. ಆ ಕಾಗದದ ಮೇಲೆ ಈ ಕೆಳಗೆ ಕಂಡಂತೆ ಬರೆದೆ:



ಶ್ರೀ ರಾಯರು ಟೋಪಿ ಹಾಕಿದಾಗಲೂ, ಬರೀ ಕ್ರಾಪಿನ ತಲೆಯಲ್ಲಿಯಾದರೂ ಬ್ಯಾಂಕಿಗೆ ಹೋದರೆ ಅವರ ಗುರ್ತು ಸಿಗಲೆಂದು ಅವರ ಬೊಂಬೆಗಳೆರಡನ್ನೂ ಬರೆದೆ. ಅನಂತರ ಮಧ್ಯದಲ್ಲಿ ಅಡ್ಡಗಂಧದಂತೆ ಎರಡು ಗೀಟೆಳೆದೆ. ಅದರ ಮಧ್ಯೆ, ಬೀಜ ಮಂತ್ರದಂತೆ & Co ಎಂಬ ಮಾತುಗಳನ್ನೂ ಬರೆದೆ. ಒಂದು ಕಡೆ ಬರೆದಿದ್ದನ್ನು ಹೊಡೆದು ತಿರುಗಿ ಬರೆದು ಸಹಿ ಹಾಕಿದೆ. ಈ ರೀತಿ ಏನೇನೋ ವಿಚಿತ್ರಮಾಡಿ ಆತನ ಕೈಯ್ಯಲ್ಲಿಟ್ಟೆ.

ಆತನು ನಸುನಗುತ ಅದನ್ನು ತೆಗೆದುಕೊಂಡು ಧನ್ಯವಾದಗಳನ್ನರ್ಪಿಸಿದ. ಈ ಚೀಟಿಯಿಂದ ಅವನು ಬ್ಯಾಂಕಿನಲ್ಲಿ ಹಣವನ್ನು ಪಡೆದರೆ ಅವನು ಸಾಹಸಿಯೇ ಹೌದು ಎಂದುಕೊಂಡೆ. ಮೊನ್ನೆ ತಾನೇ ಅದೇ ಬ್ಯಾಂಕಿನಲ್ಲಿ ನಾನೇ ಖುದ್ದು ಹೋಗಿ ಐದು ರೂಪಾಯಿ ಕೇಳಿದರೆ, ನಿಮ್ಮ ಲೆಕ್ಕದಲ್ಲಿ ಹಣವಿಲ್ಲ, ಆಗಲೇ ಇನ್ನೂರು ರೂಪಾಯಿ ಸಾಲ ಇದೆ. ಅದನ್ನು ತೀರಿಸಿ ಎಂದ ಬ್ಯಾಂಕಿನ ಅಧಿಕಾರಿಗಳು. ಈ ಶಿಶು ಚೆಕ್ಕಿಗೆ ಹಣ ಸುರಿಯುತ್ತಾರೆಯೇ ಎಂಬ ಧೈರ್ಯ.

ಆದರೇನಾಯಿತು ಗೊತ್ತೆ. ಮಾರನೆ ದಿನ ನನಗೊಂದು ಕಾಗದ ಬಂತು ಬ್ಯಾಂಕಿನಿಂದ. ನಾನು, ಶ್ರೀ........ರಾಯರಿಗೆ ಕೊಟ್ಟ ಕಾಗದದ ಪ್ರಕಾರ ಹತ್ತು ರೂಪಾಯಿಗಳನ್ನು ಪಾವತಿ ಮಾಡಿದ್ದಾರೆಂದೂ, ಒಟ್ಟು ಸಾಲ ಇನ್ನೂರು ಹತ್ತು ರೂಪಾಯಿಗಳನ್ನು ನಾನು ಶೀಘ್ರದಲ್ಲೇ ತೀರಿಸಬೇಕೆಂದೂ ಬರೆದಿದ್ದರು. ಬ್ಯಾಂಕಿಗೆ ನೆಟ್ಟಗೆ ಹೋದೆ. ಅಲ್ಲಿನ ಅಧಿಕಾರಿಗಳ ಮುಂದೆ ಈ ಕಾಗದವನ್ನೆಸೆದೆ. ಹೇಗೆ ಕೊಟ್ಟಿರಿ ಹಣವನ್ನು ಎಂದೆ. ಶ್ರೀ........ರಾಯರು ಈ ಬ್ಯಾಂಕಿನ ಡೈರೆಕ್ಟರು ಅವರ ಜವಾಬ್ದಾರಿಯ ಮೇಲೆ ಕೊಟ್ಟೆವು. ನೀವು ಆ ಕಾಗದವನ್ನು ಬರೆಯಲಿಲ್ಲ

ಎಂದು ನಮಗೆ ಬರೆದರೆ ಹತ್ತು ರೂಪಾಯಿಗಳನ್ನು ನಿಮ್ಮ ಲೆಕ್ಕದಿಂದ ಖರ್ಚು ಹಾಕುವುದಿಲ್ಲ ಎಂದರು.

ನನಗೆ ಆಗಲೇ ಯೋಚನೆ. ಹಾಗೆ ಬರೆದರೆ ಸುಳ್ಳು ಬರೆದಂತೆ ಆಗುತ್ತದೆ ಯಲ್ಲವೇ. ಕೂಡಲೇ ಮನಸ್ಸಿನ ಮುಂದೆ ಹೊಳೆಯಿತು. ಲಾಯರು, ನ್ಯಾಯಾಸ್ಥಾನ, ದಿನ ಪತ್ರಿಕೆಗಳಲ್ಲಿ ನನ್ನ ಚಿತ್ರ, ನ್ಯಾಯಾಧೀಶನ ಕ್ರೂರತನ, ಸಲಾಕಿ ಹಿಂದಿನ ವಾಸ, ಇತ್ಯಾದಿ ಇತ್ಯಾದಿ.

ಮರು ಮಾತಾಡದೆ ಸೋತೆ ಎಂದುಕೊಂಡು ಹಿಂದಿರುಗಿದೆ.

"ಬಿಸಿ ಬಿಸಿ ಸುದ್ದಿ"

ಬೆಳಗಾಗುತ್ತಲೂ ಮನೆ ಬಿಟ್ಟು ಹೊರಟರೆ ನನಗೆ ಮೊದಲು ಕಣ್ಣಿಗೆ ಬೀಳುತ್ತಿದ್ದ ವ್ಯಕ್ತಿ, ಒಬ್ಬ ಮುದುಕ. ಅವನ ಪ್ರಶ್ನೆ ಯಾವಾಗಲೂ ಒಂದೇ, "ಏನ್ರಿ ಬಿಸಿ ಬಿಸಿ ಸುದ್ದಿ". ಸರಿ, ತೊಗೊಳ್ಳಿ ಆ ದಿನವೆಲ್ಲಾ ತರಕಾರಿಗೆ ಹೋಗಲಿ, ತಲೆ ಬೋಳಿಸಲಿಕ್ಕೆ ಹೋಗಲಿ, ಸರಕಾರಿ ಆಫೀಸಿಗೆ ಹೋಗಲಿ, ಬಲೆ ಬೀಸಲಿಕ್ಕೆ ಹೋಗಲಿ, ಮುದುಕ ಸಿದ್ಧ. ಎಲ್ಲೆಲ್ಲೂ ಅದೇ ಪ್ರಶ್ನೆ, "ಏನ್ರೀ ಬಿಸಿ ಬಿಸಿ ಸುದ್ದಿ ಏನ್ರಿ".

ಬೆನ್ನು ಬಗ್ಗಿದ ಮುದುಕನಿಗೆ ಮರ್ಯಾದೆ ಕೊಡೋಣವೆಂದು, ಹರಿಶ್ಚಂದ್ರನಿಗೆ ಮುಡುಪು ಕಟ್ಟಿಟ್ಟು ಆಗಿಂದಾಗ್ಯೆ ಆತನಿಗೆ ಬಿಸಿ ಬಿಸಿ ಯುದ್ಧ ಸುದ್ದಿಯನ್ನು ನನಗೆ ತೋಚಿದಂತೆ ಹೇಳುತ್ತಿದ್ದೆ, ಹಿಟ್ಲರನ ಕಣ್ಣು ಜಪಾನಿನ ಮೇಲೆ ಹೇಗಿದೆ ಎಂದೂ, ಜಪಾನೀಯರು ಬೊಂಬಿನ ಗುಂಡುಗಳನ್ನು ಉಪಯೋಗಿಸುತ್ತಿದ್ದಾರೆಂದೂ ಆ ಕಾರಣ ಅವರಿಗೆ ಸೋಲು ಸಿದ್ಧವೆಂದೂ, ಇತ್ಯಾದಿ ಇತ್ಯಾದಿ ಊಹನಾ ಪ್ರಪಂಚದ ಸುಳ್ಳು ಸುದ್ದಿಗಳನ್ನೆಲ್ಲಾ ಹೇಳಿ, ಕಡೆಗೆ ನನಗೆ ಒಂದು ರೀತಿಯಾಗಿ ಹುಚ್ಚೇ ಹಿಡಿಯಿತೆನ್ನಬೇಕು. ಈ ಮುದುಕನ ಕಾಟವನ್ನು ತಪ್ಪಿಸಿಕೊಳ್ಳದಿದ್ದರೆ ಕೆಟ್ಟೆ ಎಂದು ನಿರ್ಧಾರವಾಯಿತು.

ಆ ದಿನ ನೋಡಿ ದಿನ ಪತ್ರಿಕೆಯೊಂದರಲ್ಲಿ ಸರಕಾರದ ಪ್ರಕಟಣೆಯೊಂದನ್ನು ನೋಡಿದೆ. ಯುದ್ಧದ ಸುದ್ದಿ ಮಾತನಾಡಿದರೆ ಸಾಕು, ಸೆರೆಮನೆಗೆ ಕಳುಹಿಸುತ್ತೇವೆಂಬ ಪ್ರಕಟಣೆ ನನ್ನ ಭಾಗಕ್ಕೆ ದೇವರು ಬಂದ ಹಾಗೆ ಆಯಿತು.

ಮಾರನೆಯ ದಿನ ಒಂದು ಸಮರ ವ್ಯೂಹ ರಚಿಸಿದೆ. ಬೆಳಗಾಗುತ್ತಲೂ ಮುದುಕನು ಎಂದಿನಂತೆ ಸಿಕ್ಕಿ, "ಏನ್ರಿ ಬಿಸಿ ಬಿಸಿ ಸುದ್ದಿ". ಹೇಳುತ್ತೇನೆ ಹತ್ತು ಗಂಟೆಗೆ ಈಗ ರೇಡಿಯೋ ಕೇಳಲಿಕ್ಕೆ ಹೋಗುತ್ತಿದ್ದೇನೆ, ಎಂದು ಹೇಳಿ ಛಂಗು ಹೊಡೆದು ತಪ್ಪಿಸಿಕೊಂಡೆ.

ಹತ್ತು ಗಂಟೆಗೆ ಹಾಳು ಮಠದ ಬಾಗಿಲಲ್ಲಿ ಸಿಕ್ಕೇ ಸಿಕ್ಕಿದ ಮುದುಕ. ಕೇಳಿಯೇ ಕೇಳಿದ, "ಏನ್ರೀ, ಬಿಸಿ ಬಿಸಿ ಸುದ್ದಿ" ಅಂತ. ಸಾವಧಾನವಾಗಿ ಹೇಳ

ತೊಡಗಿದೆ. ಹತ್ತಿರಿದ್ದ ಕಲ್ಲು ಕಟ್ಟೆಯ ಮೇಲೆ ಮೊದಲು ಕೂಡಿಸಿ ನಂತರ ಅಳಿಯನಿಗೆ ಮಾವ ಬುದ್ಧಿ ಹೇಳುವ ರೀತಿಯಲ್ಲಿ ನಯವಾಗಿ ಭಯವಾಗಿ ಹೇಳ ಹೊರಟೆ. ಹೇಗೆ ಹಿಟ್ಲರನು ಪೂರ್ವ ಜನ್ಮದಲ್ಲಿ ತ್ರಿಶಂಕು ಸ್ವರ್ಗದಲ್ಲಿದ್ದುದು, ಆ ಕಾರಣದಿಂದ ಈ ಜನ್ಮದಲ್ಲಿ ಭೂಮಿ ಬೇಕು, ನಮಗಾಗಿಯೇ ಇರಬೇಕು, ಹಿಟ್ಲರಸ್ಥಾನ ಆಗಲೇ ಬೇಕು ಅಥವಾ ಜರ್ಮನಿ ಸ್ಥಾನ ದೊಡ್ಡದಾಗಬೇಕು, ಇತ್ಯಾದಿಗಳಿಗೆಲ್ಲಾ ಕಾರಣ. ಇವೆಲ್ಲವನ್ನೂ ಹೇಳುತ್ತಿದ್ದಾಗಲೇ, ಹಿಂದೆಯೇ ಯಾರೋ ಬಂದಂತಾಯಿತು. ಹಿಂದಿರುಗಿ ನೋಡಿದರೆ, ಇಬ್ಬರು ಖಾಖೀ ಧಾರಿಗಳು. ಸುಮಾರು ಧಾಂಡಿಗರು.

ಯಾಕ್ರೀ ಏನು ಬೇಕ್ರೀ ಎಂದು ಸಣ್ಣ ಧ್ವನಿಯಲ್ಲಿ ಕೇಳಿದೆ. ಇಬ್ಬರೂ ನನ್ನ ಹೆಗಲ ಮೇಲೊಂದು, ಮುದುಕನ ಹೆಗಲ ಮೇಲೊಂದು ಕೈ ಹಾಕಿದರು. ಯುದ್ಧದ ಸುದ್ದಿ ಮಾತನಾಡಬಾರದೆಂದು ತಿಳಿಯದೆ? ಬನ್ನಿ ಪೋಲೀಸ್ ಠಾಣೆಗೆ, ನಂತರ ಸೆರೆಮನೆಗೆ ಎಂದರು.

ಮುದುಕ ಹಠಾತ್ತಾಗಿ ಹಣ್ಣು ಹಣ್ಣು ಮುದುಕನಾದ. "ಅಯ್ಯೋ, ಅಪ್ಪಾ ಸುಮ್ಮನೆ ಕತೆ ಹೇಳುತ್ತಿದ್ದನಪ್ಪಾ ಯುದ್ಧಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಮದುವೆಗೆ ನೆರೆದ ಮಗಳಿದ್ದಾಳೆ. ನಾನು ಜೈಲಿಗೆ ಹೋದರೆ, ಖಂಡಿತವಾಗಿ ಅಳಿಯ ಸಿಗೊಲ್ಲ, ಬಿಡಪ್ಪಾ" ಎಂದ.

ಆ ವೇಳೆಗೆ ನಾನು ಚುರುಕು ಬುದ್ಧಿಯುಪಯೋಗಿಸಿ, ಜೇಬಿನಿಂದ ಐದು ರೂಪಾಯಿ ತೆಗೆದು ಮುದುಕನಿಗೆ ಕಾಣಿಸುವಂತೆ ಖಾಖೀಧಾರಿಗೆ ಕೊಟ್ಟೆ. ಮಾತನ್ನೇನೂ ಆಡಲಿಲ್ಲ, ಆಡಬೇಕಾಗಿಯೂ ಇರಲಿಲ್ಲ ನನ್ನ ತೋಳಿನ ಮೇಲಿದ್ದ ಕೈ ಸಡಿಲವಾಯಿತು.

ಮುದುಕನೂ ಚೂಟಿ ಮುದುಕ. "ಸರ್ವನಾಶೆ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತಃ" ಐದು ರೂಪಾಯಿ ಅವನೂ ತೋಳ ಮೇಲಿನ ಕೈಗೆ ಕೊಟ್ಟ. ಅವನ ತೋಳೂ ಖಾಲಿಯಾಯಿತು.

ಇಬ್ಬರೇ ಉಳಿದೆವು. ಹಿಂತಿರುಗಿ ಮನೆಗೆ ಬರುತ್ತಾ ಏನೇನೋ ಮಾತನಾಡಲು ಹೊರಟೆ, ಮುದುಕ ನಿರುತ್ತರ, ಅಷ್ಟೇ ಅಲ್ಲ, ಮಾತನ್ನು ಆಡಲೂ ಬಿಡಲಿಲ್ಲ. "ಬಿಸಿ ಬಿಸಿ ಸುದ್ದಿ" ತಣ್ಣಗೆ ತಂಗಳಾಗೇಹೋಯ್ತು.

* * *

ಮಾರನೆಯ ದಿನ ಖಾಖೀ ಧಾರಿಗಳಿಬ್ಬರೂ, ನಮ್ಮನೆಗೆ ಬಂದರು. ನನ್ನ ಐದು ರೂಪಾಯಿ ಹಿಂದಕ್ಕೆ ಕೊಟ್ಟರು. ಸ್ಕೌಟು ಸೇರಿ ಖಾಖೀ ಬಟ್ಟೆ ಹೊಲಿಸಿದ್ದಕ್ಕೆ ಇಂದಾದರೂ ಹಣ ಸಂಪಾದನೆಯಾಯಿತಲ್ಲಾ, ಎಂದು ಹೇಳಿದರು. ನನ್ನ ಸಮರ ವ್ಯೂಹವನ್ನು ಹೊಗಳಿ, ಮುದುಕನ ಬಾಯಿ ಮುಚ್ಚಿಸಿದುದನ್ನು ಕೊಂಡಾಡಿದರು.

—ಎ. ಕೇ.

———o———

ಅ. ಹ. ಮಾದನ ಅನುಭವ

(ಒಂದು ಕತೆಯೇ ?)

ಸೂರ್ಯವಂಶಜನಾದ ಮೊದಲನೆ ರಾಜೇಶ್ವರನು ರಾಜೀವಪುರದ ರಾಜನಾಗಿದ್ದಾಗ, ಉತ್ತರ ಗಡಿಯಲ್ಲಿದ್ದ ಹರಿಮುಖ ಡಿಸ್ಟ್ರಿಕ್ಟ್‌ನಲ್ಲಿ ಹುಲಿಗಳ ಹಾವಳಿಯು ಒಮ್ಮೆ ಬಹಳ ಹೆಚ್ಚಾಗಿಹೋಗಿತ್ತು. ಜನಗಳನ್ನೂ, ಜಾನುವಾರುಗಳನ್ನೂ ಹುಲಿಗಳು ತಿಂದು ತಿಂದು ಅಲ್ಲಿದ್ದ ತೆರಿಗೆಯಧಿಕಾರಿಯಾದ ಅ. ಹ. ಮಾದನು ಇನ್ನು ಮುಂದೆ ನನ್ನ ಕೆಲಸವು ಬಲು ಕಷ್ಟವೆಂದು ನಿಟ್ಟುಸಿರು ಬಿಡುವಂತಾಯಿತು.

ಆತನೇನೊ ಕಾಡುಮರಗಳ ಮೇಲೆಲ್ಲ ಪ್ರಜೆಗಳನ್ನಾಗಲೀ ಪ್ರಜೆಗಳ ದನ ಕರುಗಳನ್ನಾಗಲೀ ತಿನ್ನುವುದು, ಕೊಲ್ಲುವುದು ಕಾನೂನು ವಿರುದ್ಧವೆಂದು ಜಾಹಿರಾತು ಮಾಡಿಸಿದನಾದರೂ, ಕಾಡು ಹುಲಿಗಳು ಇದನ್ನು ಲಕ್ಷಿಸದೆ ತಮ್ಮ ಹಾವಳಿಯನ್ನು ಮಾಡಿಯೇ ಮಾಡುತ್ತಿದ್ದುವು. ಅಷ್ಟೇ ಅಲ್ಲದೆ ಸುಂಕದ ಕಟ್ಟೆಗಳಿಗೇ ನುಗ್ಗಿ ಮಹಾ ಸರ್ಕಾರದ ಅಧಿಕಾರಿಗಳನ್ನೇ ಹೆದರಿಸಿ ಬೆದರಿಸಿ ಕೊಲ್ಲುತ್ತಿದ್ದುವು.

ಹೀಗಾಗಿ ಕಂದಾಯ ವಸೂಲಿಗೆಂದು ಕೆಲವು ಜಮೀರ್ನ್ದಾರರ ಬಳಿಗೆ ಅ. ಹ. ಮಾದನ ಅನುಯಾಯಿಗಳು ಹೋಗಿ ಕಂದಾಯವನ್ನು ಕೇಳಿದಾಗ, ಅವರೆಲ್ಲರೂ, "ಸ್ವಾಮಿ, ನಮ್ಮ ಭೂಮಿಯಲ್ಲಿನ ಬೆಳೆಯನ್ನು ಕುಯ್ಯಲು ಕೂಡ ನಾವು ಹೋಗುವಂತಿಲ್ಲ. ಹುಜೂರು ಸರಕಾರವೇ ಬೆಳೆಯನ್ನು ಕುಯ್ಯಿಸಿ ಕಂದಾಯಕ್ಕೆ ಉತ್ತಾರು ಹಾಕಿಕೊಳ್ಳಲಿ" ಎಂದು ಹೇಳಿಯೇ ಬಿಟ್ಟರು.

ಇದನ್ನೆಲ್ಲಾ ಕೇಳಿದ ಅ. ಹ. ಮಾದನಿಗೆ ಬಲು ದುಃಖವಾಯಿತು. ಆತನು ಸಹಜವಾಗಿ ಹೆಂಗರುಳಿನವನು. ಈ ಸುದ್ದಿಯನ್ನು ಕೇಳಿದ ಮೇಲೆ ಸರಕಾರಕ್ಕೆ ಒಂದು ಕಾಗದವನ್ನು ಬರೆದನು ಹುಲಿಗಳ ಹಾವಳಿಯಿಂದ ಜಮೀನುದಾರರೇ ಸಾಯುತ್ತಿದ್ದಾರಾಗಿ, ಈ ಸಲ ಕಂದಾಯದ ವಸೂಲಿಯನ್ನು ಮಾಫಿ ಮಾಡಬೇಕೆಂದು ಸೂಚಿಸಿದನು.

ಘನ ಸರ್ಕಾರಕ್ಕೆ ಈ ಕಾಗದ ಹೋದ ಕೂಡಲೆ ಸಚಿವೋತ್ತಮರು, ಅ. ಹ ಮಾದನು ಅಪ್ರಯೋಜಕ, ಅವನನ್ನು ಕೆಲಸದಿಂದ ವಜಾಮಾಡಿ, ಬಸ್ ನಿಲ್ದಾಣಗಳಲ್ಲಿ ಪ್ರಯಾಣೀಕರ ಜೀವವನ್ನೇ ಹಿಂಡುತ್ತಿದ್ದ ಪ್ರಧಾನ ತಿರುಕನೊಬ್ಬನಿಗೆ ಈ ಕೆಲಸವನ್ನು ಕೊಟ್ಟರು.

ಹಗಲೊಂದರಲ್ಲಿ ಅ. ಹ. ಮಾದನು ಅಧಿಕಾರ ವರ್ಗದಿಂದ ಬೀದಿಗೆ ನೂಕಲ್ಪಟ್ಟನು. ಅವನ ಹಿಂದಿನ ಕೆಲಸದ ಮಹತ್ವದಿಂದಲೋ ಏನೋ ಹರಿಮುಖದಲ್ಲಿ ಯಾರೂ ಅವನನ್ನು ಮಾತು ಕೂಡಾ ಆಡಿಸಲಿಲ್ಲ. ಹೀಗಾಗಿ ಅ ಹ. ಮಾದನು ಹಾದಿಯಲ್ಲಿ ಓಡಾಡುತ್ತಾ ಹಾಗೆಯೇ ಸಂಗಾವತಿ ನದಿಯ ಬಳಿಗೆ ಬಂದನು. ಅಲ್ಲಿ ಯಾರೋ ತಮ್ಮ ಹಸುವಿಗೆ ನೀರು ಕುಡಿಸುತ್ತಿದ್ದರು ನೀರು ಕುಡಿದನಂತರ ಹಸುವನ್ನು ಚಿಕ್ಕದುಮಾಡಿ, ತಮ್ಮ

ತೋಳಿನಲ್ಲಿದ್ದ ಜೋಳಿಗೆಯಲ್ಲಿ ಇಟ್ಟು ಕೊಂಡು ಮುಂದೆ ನಡೆದರು.

"ಆಹಾ ಇಷ್ಟು ಆಶ್ಚರ್ಯಕರವಾದ ಕೆಲಸಗಳನ್ನು ಮಾಡುವವನು ಒಬ್ಬನೇ —ಮಹಾತ್ಮ ಯಕ್ಷಿಣಿಯೇ ಇರಬೇಕು" ಎಂದು ಅ. ಹ. ಮಾದನು ಯೋಚಿಸಿ, ಆತನನ್ನು ಹಿಂಬಾಲಿಸಿದನು, ಮತ್ತು ನಮ್ರತೆಯಿಂದ ಬಾಗಿ ನಮಸ್ಕರಿಸಿ, "ಯಕ್ಷಿಣಿ ಮಹಾನುಭಾವರೇ ತಾವು ದಯಮಾಡಿ ನನ್ನ ಈ ಕಷ್ಟಕಾಲದಲ್ಲಿ ಬುದ್ಧಿವಾದ ಹೇಳಬೇಕು, ನಾನೇನು ಮಾಡಲಿ" ಎಂದು ಕೇಳಿಕೊಂಡನು. ತನ್ನ ಕಷ್ಟವನ್ನೆಲ್ಲಾ ಹೇಳಿಕೊಂಡನು.

"ಯಾತಕ್ಕಾಗಿ ನೀನು ದುಃಖಪಡುವೆ ಕಂದಾಯದ ವಸೂಲಿಯು ನಿನ್ನ ಕರ್ಮ. ಅದನ್ನು ನೀನು ಸರಿಯಾಗಿ ಮಾಡದೆ, ಧರ್ಮ, ನ್ಯಾಯ ಇವುಗಳ ಗೋಜಿಗೆ ಹೋದುದು ಮಹಾಪರಾಧ, ಆ ಅಪ ರಾಧಕ್ಕೆ ಈ ಶಿಕ್ಷೆಯು ಆಗಲೇಬೇಕಾದ್ದು, ಈಗಲೂ ನೀನು ಯಾವ ಹುಲಿಗಳು ನಿನ್ನ ಕೆಲಸಕ್ಕೆ ಕುಂದು ತಂದುವೋ ಆ ಹುಲಿಗಳನ್ನೇ ಅನುಕರಣಮಾಡು, ಅವು ಗಳ ಸ್ವಭಾವವನ್ನು ನೋಡಿ ತಿಳಿದುಕೊ, ಅವುಗಳ ಬೇಟೆ ವಿಧಾನವನ್ನು ಅರಿತುಕೊ ನಂತರ ಮಂಗಳವಾಗುವುದು, ನಿನ್ನ ಕೆಲ ಸವೂ ಹುಲಿಗಳ ಕೆಲಸವೂ ಒಂದೇ ರೀತಿ ಯದಲ್ಲವೇ, ಅವುಗಳಿಂದ ನಿನಗೂ ಕರ್ಮ ಮಾರ್ಗವು ತಿಳಿಯಲಿ ಎಂದೇ ದೇವದೇವನು ಹುಲಿಗಳ ಕಾಟವನ್ನು ನಿನಗೆ ಕೊಟ್ಟಿದ್ದು" ಎಂದು ಹೇಳಿ ಅದೃ ಶ್ಯನಾದನು.

ಗುರು ವಾಕ್ಯಗಳನ್ನು ಕೇಳಿ, ತನ್ನ ತಪ್ಪನ್ನು ಮನಗಂಡ ಅ. ಹ. ಮಾದನು ತಲೆ ತಲೆ ಚಚ್ಚಿಕೊಂಡನು. ಇನ್ನು ಮುಂದೆ ಹುಲಿಗಳ ಚಲನ ವಲನಗಳನ್ನು ನೋಡಿ ತಾನೂ ಪ್ರಗತಿಗಾಮಿಯಾಗಿ ಕ ರ್ಮಶ್ರೇಷ್ಠನೆನಿಸಿಕೊಳ್ಳಲುನಿರ್ಧರಿಸಿದನು.

ಕಳೆದ ಕೆಲ ದಿನಗಳ ಉಪವಾಸದ ಫಲವಾಗಿ, ಎಮುಕೆ ಚರ್ಮವಾಗಿದ್ದನಾದ ಕಾರಣ ಯಾವ ಹೊಟ್ಟೆಗಿಲ್ಲದ ಹುಲಿ ಯೂ ತನ್ನ ಮೇಲೆ ಬೀಳುವುದಿಲ್ಲವೆಂಬ ಧೈರ್ಯ ಹೊಂದಿದನು. ಹಾಗೆಯೇ ಕಾಡು ಮೇಡುಗಳಲ್ಲಿ, ಹುಲಿಗಳ ಬಿಡಾರ ಸ್ಥಳಗಳಲ್ಲಿ ಹೊಂಚು ಕಾಯಲು ಪ್ರಾರಂ ಭಿಸಿ ಅವುಗಳ ನೀತಿ ರೀತಿಗಳನ್ನು ಕಲಿ ಯಲುಪಕ್ರಮಿಸಿದನು.

ಹುಲಿಗಳ ಚತುರತೆಯನ್ನು ಕಂಡು ಅ. ಹ. ಮಾದನು ತಲೆ ತೂಗಿದನು. ನಿರ್ಬಲ ಜಿಂಕೆಗಳನ್ನು ಹೇಗೆ ಹೆದರಿಸಿ ನ್ಯಾಯಾಸ್ಥಾನಕ್ಕೆ ಎಳೆಯುತ್ತೇನೆಂದು ಬೆದರಿಸಿ ಸುಲಿಯುತ್ತಿದ್ದುದು, ಸ್ವಲ್ಪ ಶಕ್ತಿಯುತವಾದ ಕಾಡೆಮ್ಮೆಗಳನ್ನು ಶೌರ್ಯದಿಂದ ಹಿಂಬಾಲಿಸಿ ಸಾಲ ಕೊಟ್ಟ ವನಂತೆ ಬೆನ್ನು ಹತ್ತಿ ಬೆನ್ನು ಮೂಳೆ ಮುರಿಯುತ್ತಿದುದು, ಇವುಗಳೆಲ್ಲವನ್ನೂ ನೋಡಿದನು

ತಾನು ನೋಡಿದುದನ್ನೆಲ್ಲಾ, ತಿಳಿದು ಕೊಂಡುದುದನ್ನೆಲ್ಲಾ ಒಂದು ಪುಸ್ತಕ ದಲ್ಲಿ ಬರೆದಿಟ್ಟುಕೊಂಡನು. ಪ್ರಾಚೀನ ಸಾಹಿತ್ಯ ಭಂಡಾರದಲ್ಲಿ ಈಗಲೂ ಅಮೂಲ್ಯ ಸಂಗ್ರಹದಲ್ಲಿ ಶೋಭಿಸುತ್ತಿ ರುವ "ಸುಖ ಸುಲಿಗೆಯ ವಿಧಾನ ರತ್ನಾ ಕರ"ವೇ ಅದು. ಈಗಲೂ ಸರಕಾ ರದವರು ಕಂದಾಯ ವಸೂಲಿಯ ಕಾನೂನು ಮಾಡಬೇಕಾದರೆ ಆ ಪುಸ್ತ ಕದ ಸಲಹೆಗಳನ್ನೇ ಆಶ್ರಯಿಸುತ್ತಾರೆ.

ಈ ಸಮಯದಲ್ಲಿ ಪ್ರಧಾನ ತಿರುಕನು ಕಂದಾಯ ವಸೂಲಿಗಾಗಿ ಹೊರಟನು.

ಏನೂ ಪ್ರಯೋಜನವಾಗಲಿಲ್ಲ. ಒಸ್ ನಿಲ್ದಾಣದ ಪ್ರಯಾಣಿಕರ ಹತ್ತಿರವಾದರೂ ಕಾಸು ಕೇಳಬಹುದು. ಹರಿಮುಖದವರ ಹತ್ತಿರ ಕುರುಡು ಕಾಸೂ ಸಿಗುವುದಿಲ್ಲ ಎಂಬುದನ್ನು ಮನಗಂಡನು. ಇದಕ್ಕೆ ಒಂದೇ ಮಾರ್ಗ. ಹುಲಿಗಳನ್ನು ನಿರ್ಮೂಲ ಮಾಡುವುದು; ಎಂದು ಸಿದ್ಧಾಂತ ಮಾಡಿ ಕೆಲವು ದೃಢಕಾಯದ ಸಹೋದ್ಯೋಗಿಗಳನ್ನು ಕೂಡಿಕೊಂಡು ಹುಲಿಯ ಶಿಕಾರಿಗೆಂದು ಹೊರಟನು. ಸತ್ತ ಹಸುಗಳಿದ್ದ ಸ್ಥಳದ ಹತ್ತಿರವೇ ಸಶಸ್ತ್ರನಾಗಿ ಕಾಯುತ್ತ ನಿಂತನು.

ಆ ದಿನ ಅ. ಹ. ಮಾದನು ಹುಲಿಗಳ ಓಡಾಟವನ್ನು ನೋಡುತ್ತ ಚಕಿತನಾದನು. ಹಸುಗಳ ಬಿದ್ದ ಸ್ಥಳಕ್ಕೆ ನೇರನೆ ಹೋಗದೆ ಈ ಹುಲಿಗಳು ಸುತ್ತುಮುತ್ತ ಠಳಾಯಿಸುವುದಕ್ಕೆ ಶುರು ಮಾಡಿದುವು. ಅಲ್ಲಿ ಮೂಸಿ, ಇಲ್ಲಿ ನಿಂತು, ಅತ್ತ ತಿರುಗಿ ಇತ್ತ ಸರಿದು, ಬಾಲ ಭಂಗಿಸಿ, ಮೈಯ ಬಗ್ಗಿಸಿ, ನೋಡಲಾರಂಭಿಸಿದುವು. ಆಗ ಅ. ಹ. ಮಾದನಿಗೆ ಸಂತೋಷವಾಯ್ತು. ಆಹಾ! ಹರಿಮುಖದ ತೆರಿಗೆಯಧಿಕಾರಿಯ ಕೆಲಸ ತಿರುಗಿ ಖಾಲಿ ಬಿತ್ತು ಎಂದು ಅರಿತನು. ಹುಲಿಗಳು ಯಾವ ದಿಕ್ಕಿನಿಂದ ಲಗ್ಗೆ ಹತ್ತುವುದು ಯಾವ ದೂರದಿಂದ ನೆಗೆದು ತಿರುಕ ಅಧಿಕಾರಿಯನ್ನು ಮಟ್ಟಮಾಡುವುದು ಇವುಗಳನ್ನು ನೋಡುತ್ತ ಹಿಗ್ಗಿದನು.

ಆದರೇನು, ನಾವೇನು ಯೋಚಿಸಿದರೂ ವಿಧಿಯು ಹಿಂದೆ ನಿಂತು ಬೇರೊಂದು ಬಗೆಯುವುದಲ್ಲವೇ—ಹುಲಿಗಳು ಸಂಚು ನಡೆಸಿ, ಇನ್ನೇನು ಹಾರಬೇಕು ಅನ್ನುವಾಗ, ಅ. ಹ. ಮಾದನು ಕೂಗಿದನು. 'ಹೋ! ಸೋದರ, ಹುಷಾರು' ಎಂದು, ಅವನ ಹೆಂಗರುಳು ಕಡೆಗೂ ಮೋಸ ಮಾಡಿತು, ಮಹಾ ಭಾರತದ ಕರ್ಣನಂತೆ. ಅ. ಹ. ಮಾದನೂ ಶಾಪಗ್ರಸ್ತನೋ ಏನೋ? ಅಂತು ಇವನು ಕೂಗಿದ ಕೂಡಲೇ ಪ್ರಧಾನ ತಿರುಕನು ಎಚ್ಚರಗೊಂಡು ಕೋವಿಯನ್ನು ಹಿಡಿದು ಹಿಂತಿರುಗಿದನು. ಹುಲಿಗಳು ತಮ್ಮ ಸಮರ ವ್ಯೂಹವು ಹಾಳಾದುದಕ್ಕೆ ನೊಂದು ಹಿಂದಕ್ಕೆ ಹಾರಿದುವು. ಅಲ್ಲಿಯೇ ಅ.ಹ. ಮಾದನು ಅವುಗಳ ಧಾಳಿಗೆ ಸಿಕ್ಕಿ ಹರ ಹರ ಎಂದನು.

ಪ್ರಧಾನ ತಿರುಕನು ಧ್ವನಿ ಬಂದ ಕಡೆಗೆ ಬಂದು ನೋಡಿದರೆ, ಅ. ಹ. ಮಾದನ ಕಳೇಬರಹವು ಸಿಕ್ಕಿತು. ಹತ್ತಿರವೇ "ಸುಖಸುಲಿಗೆಯ ವಿಧಾನ ರತ್ನಾಕರ"ದ ಮೂಲ ಪ್ರತಿಯು ಸಿಕ್ಕಿತು.

ಊರಿಗೆ ಹಿಂತಿರುಗಿದ ಮೇಲೆ, ಆ ಪುಸ್ತಕದ ಸಲಹೆಗಳನ್ನನುಸರಿಸಿ ಕರ್ಮಶ್ರೇಷ್ಠನೆಂಬ ರಾಜ ಮನ್ನಣೆಯನ್ನು ಸಂಪಾದಿಸಿಕೊಂಡನು. ಈ ರೀತಿ ಊರಿನವರೆಲ್ಲರೂ ಶ್ರವಗಳಂತಾದುದನ್ನು ನೋಡಿ ಹುಲಿಗಳೂ ಇನ್ನು ಮೇಲೆ ನಮಗೆ ಕ್ಷಾಮ ಎಂದು ಆ ದೇಶವನ್ನೇ ಬಿಟ್ಟು ಹೊರಟು ಹೋದುವು.

ಹೀಗೆ ಪುನಃ ಶಾಂತಿ ಏರ್ಪಟ್ಟಿತು.



ನಮ್ಮ ರಸ್ತೆಯಲ್ಲಿ ನಾನೊಬ್ಬನೇ ಈಗ ಪೇಪರು ತರಿಸೋದು.

ನಮ್ಮ ಶಿವು

ಆರತಿ ಎತ್ತೋಕೆ ಒಬ್ಬ ಮಗಳು—ಕೀರ್ತಿ ತರೋಕೆ ಒಬ್ಬ ಮಗ ಎಂದು ನಮ್ಮ ತಂದೆಗೆ ನಾನು, ನನ್ನ ಅಣ್ಣ ಶಿವು ಇಬ್ಬರೆ ಮಕ್ಕಳು. ನಾನೇನೋ ಬೇಕಾದಷ್ಟು ಸಲ, ಮುದುಕಿಯರು, ಯುವತಿಯರು, ಹುಡುಗಿಯರ ಜತೆಯಲ್ಲೆಲ್ಲಾ ಆರತಿ ಎತ್ತಿದ್ದೇನೆ— ಎತ್ತಿಸಿಕೊಂಡೂ ಇದ್ದೇನೆ. ಆದರೆ ನಮ್ಮಣ್ಣ ಶಿವು ಇನ್ನೂ ಕೀರ್ತಿ ತಂದಿಲ್ಲ ಅದೇ ಈಗ ದೊಡ್ಡ ಸಮಸ್ಯೆಯಾಗಿದೆ. ನಮ್ಮ ತಾಯಿಗೆ ಖಂಡಿತ ಶಿವು ಕೀರ್ತಿ ತರುತ್ತಾನೆಂದು. ನಮ್ಮ ತಂದೆಗೆ ಇನ್ನೂ ಖಂಡಿತ ಅಪ ಕೀರ್ತಿ ತರುತ್ತಾನೆಂದು. ನನಗೆ ಅನುಮಾನ ಬಂದಿದೆ. ಅವನ ವಿಷಯ ನಿಮಗೆ ಹೇಳಿ, ಅವನ ಚಿತ್ರ ಬರೆದು, ನಿಮ್ಮ ಸಲಹೆಗಳನ್ನು ತೆಗೆದುಕೊಂಡು, ಈ ವಿಷಯ ವನ್ನು ನಿರ್ಧರಿಸುತ್ತೇನೆ.

ನಮ್ಮ ತಾಯಿಯು ಹೇಳುವಂತೆ ಶಿವು ಹುಟ್ಟಿದಾಗ ಒಳ್ಳೆ ಗುಲಾಬಿ ಎಸಳ ಹಾಗೆ ಕೆಂಪಗಿದ್ದ. ಈಗ ಬಿಸಿಲಿನ ಝಳಕ್ಕೆ ಬಾಡಿ ಸ್ವಲ್ಪ ಎಣ್ಣೆಗೆಂಪಾಗಿದ್ದಾನೆ. ಎಣ್ಣೆಗೆಂಪು ಎಂದರೆ ಕರಿದ ಬಾಂಡ್ಲೆಯಲ್ಲಿ ಮಿಕ್ಕಿರುವ ಎಣ್ಣೆಯ ಬಣ್ಣ ಅಣ್ಣನ ರೂಪನ್ನು ತಂಗಿಯರು ಬಣ್ಣಿಸಬಾರದಂತೆ. ಅದಕ್ಕಾಗಿ ಒಂದೇ ಮಾತಿನಲ್ಲಿ ಚಿತ್ರಿ ಸುತ್ತೇನೆ. ದೋಸೆಯಂತೆ ದುಂಡಾದ ಮುಖ. ಆಲೂಗಡ್ಡೆಯಂತಹ ಗೆಡ್ಡೆ ಮೂಗು, ಕಾಬೂಲ್ ದ್ರಾಕ್ಷಿಯಂತಿರುವ ಕಣ್ಣುಗಳು, ಇತ್ಯಾದಿ. ಮುಖ್ಯ ಅಳುವ ಮಕ್ಕಳೆದುರಿಗೆ ಇವನು ನಿಂತರೆ ಅವುಗಳು ಸೋಜಿಗವನ್ನು ಕಂಡಂತೆ ಅಳುವನ್ನು ನಿಲ್ಲಿಸುತ್ತಿದ್ದರು. 'ಮುಪ್ಪಿನಲ್ಲಿ ಮಾಯವಾಗುವ ರೂಪು ಇದ್ದರೇನು, ಹೋದ ರೇನು' ಎಂದುಕೊಂಡು ಶಿವು ಕಾಯಕಲ್ಪ ಮಾಡಿದವನಂತೆ ಆರೋಗ್ಯದಿಂದಿರ ಬೇಕು, ಎಂದು 'ಸಾಂ' ಮಾಡಿದ್ದೂ ಮಾಡಿದ್ದೆ. ಅವನ ಆರೋಗ್ಯ ತಕ್ಕ ಮಟ್ಟಿಗಿದೆ. ಹತ್ತಾರು ವಡೆಗಳನ್ನೂ, ಸಾಕಷ್ಟು ಭೋಜನವನ್ನೂ, ಕಷ್ಟವಿಲ್ಲದೆ ಜೀರ್ಣಿಸುತ್ತದೆ.

ಶಿವು ನನಗಿಂತ ನಾಲ್ಕು ವರ್ಷ ದೊಡ್ಡವನು. ಆದರೂ ಎರಡು ಕ್ಲಾಸು ಮುಂದಿದ್ದಾನೆ. ಅವನ ಮನಸ್ಸಿನಲ್ಲಿ ನನ್ನಂತಹ ಹೆಣ್ಣು ಮಕ್ಕಳಿಗೆ ವಿದ್ಯೆ ಸಾಕಂತೆ. ಆದರೆ ಅವನಿಗೆ ವಿದ್ಯಾವತಿಯಾದ ಹೆಂಡತಿಯೇ ಬೇಕಂತೆ—ಈ ತೀರ್ಮಾನದ ಅರ್ಥ ನನಗೆ ಮೊದ ಮೊದಲು ಆಗಲಿಲ್ಲ. ಆ ಮೇಲೆ ಹೊಳೆಯಿತು. ನನ್ನ ವಿದ್ಯಕ್ಕೆ ಇವನಪ್ಪನ ದುಡ್ಡು ಖರ್ಚು. ಹೆಂಡತಿ ವಿದ್ಯೆಗೆ ಮಾವನ ದುಡ್ಡು. ಕಂಡವರ ದುಡ್ಡು ಹೋದರೆ ಇವನಿಗೇನು? ಈ ತರ್ಕ ನ್ಯಾಯ ಸಮ್ಮತವೋ ಎಂಬುದನ್ನು ನೀವು ಹೇಳಬೇಕು. ಯೋಚಿಸಿದಷ್ಟೂ ಖಂಡಿತವಾಗಿ ಕಾಣುತ್ತದೆ ನನಗೆ.

ಶಿವು ಗಮಕಿಯಾಗಿದ್ದರೆ ಖಂಡಿತವಾಗಿ ಸುಖ ಜೀವನ ನಡೆಸುತ್ತಿದ್ದ. ಒಮ್ಮೆ ಯಾರೋ ಭಿಕ್ಷುಕರು ಹಾಡಿದಂತಾಯಿತು. ಒಳಗಿಂದ ಒಂದ್ಹಿಡಿ ಅಕ್ಕಿಯನ್ನು ತೆಗೆದುಕೊಂಡು ಹೋದೆ. ಬಾಗಿಲಲ್ಲಿ ಯಾರೂ ಇಲ್ಲ. ಬಾಗಿಲ ಬಳಿಯ ಕೊಠಡಿಯಲ್ಲಿ ಕುಮಾರ ಕಂಠೀರವನು ಹೊಸ ಕನ್ನಡ ಪದ್ಯಗಳನ್ನು ಓದುತ್ತಿದ್ದ. ಅಷ್ಟು ಸುಶ್ರಾವ್ಯ ಕಂಠ, ಹಾಡುವ ರೀತಿ ಇತ್ಯಾದಿ.

ಮುತ್ತೈದೆಯರ ಕೊರಳಲ್ಲಿ ಮಾಂಗಲ್ಯ ಇದ್ದಂತೆ ಶಿವು ಕೊರಳಲ್ಲಿ ಸದಾ ಬೀಗದ ಕೈದಾರ. ಮನೆಗೆ ಬಂದ, ತಂದ ಯಾವ ಸಾಮನನ್ನೂ ನಾನು ನೋಡುವ ಮೊದಲೇ ಬೀರುವಿನಲ್ಲಿಟ್ಟು ಬೀಗ ಹಾಕಿಬಿಡುತ್ತಾನೆ. ಒಂದೊಂದು ಸಾರಿ ನನಗನ್ನಿಸುತ್ತದೆ, ಇವನು ಮದುವೆಯಾದರೆ ಹೆಂಡತಿಯ ಬಾಳೂ ಬೀರುವಿನಲ್ಲಿಯೋ ಎಂದು.

ಕೋಪ ಬಂದಾಗ ಶಿವು ಶಿವನಲ್ಲ, ರುದ್ರ ಆಗುತ್ತಾನೆ. ಮನೆಯ ಹಿತ್ತಲಿನ ಸೀಬೇಕಾಯನ್ನು ಕಿತ್ತ ಚಿಕ್ಕ ಹುಡುಗನೊಬ್ಬನನ್ನು ನೀರು ಕೇಳುವಂತೆ ಹೊಡೆವುದು, ಸಕ್ಕರೆ ಆಶೆಗೆ ಸಾಲ್ಗಟ್ಟಿ ಬಂದ ಇರುವೆಗಳಿಗೆಲ್ಲಾ ಸೀಮೆಯೆಣ್ಣೆ ಬೆಂಕಿ ಇಡುವುದೂ, ಭಿಕ್ಷಕ್ಕೆ ಬಂದ ಬಡ ದಂಪತಿಗಳನ್ನು 'ಏನ್ರೀ ಇಬ್ಬರೂ ಹೊರಟುಬಿಟ್ಟಿರಿ. ಮನೆಯಲ್ಲಿ ಅಡಿಗೆಗೆ ಅಡಿಗೆಯವನಿದ್ದಾನೋ' ಎಂದು ಮೂದಲಿಸುವುದು, ಮುಖ್ಯ ಅವನ ಗುಣಗಳು, 'ಗಂಡುಗಲಿ' ಯಾವಾಗಲೂ ಸದಾ ಸಿದ್ಧ.

ಇಷ್ಟಾದರೂ ಒಂದು ದಿನವಾದರೂ ಬೈಗಳಿಗೆ ಸಿಕ್ಕಿಲ್ಲ. ತನ್ನ ತಪ್ಪನ್ನು ಮುಚ್ಚುವುದು, ಹೆರರ ಮೇಲೆ ಹೊರಿಸುವುದು ಸಮಯ ನೋಡಿ; ಗಾಂಢೀವ ದಂತಿರುವ ಆಳು, ತಾಯಿಯ ನೆರವು ಇವುಗಳನ್ನು ಬಲು ಚಾಣಕ್ಯತನದಿಂದ ಉಪಯೋಗಿಸಿಕೊಳ್ಳುತ್ತಿದ್ದನು. ಸೋದರ ಮಾವನ ಮನೆ ಇವನ ಕಾಲೇಜು ಹತ್ತಿರ. ಹೋಗಿ ಮನೆಗೆ ಬಂದಾಗಲೆಲ್ಲಾ ಮಾವನ ಮನೆಗೆ ಹೋಗಿದ್ದೆ. ಅತ್ತೆ ಇಂತಹ ಸೀರೆ ತಂದಿದ್ದರು. ಈ ರೀತಿ ಬಳೆ ತೊಟ್ಟಿದ್ದರು, ಇಂತಹ ಅಡಿಗೆ ಎಂದು ಸುಳ್ಳು ಸರವನ್ನೇ ಹೇಳಿ, ಬೈಗಳ ತಪ್ಪಿಸಿಕೊಳ್ಳುತ್ತಿದ್ದನು.

ಮುಖ್ಯ ಕೀರ್ತಿ ತರೋ ಗಂಡು ಮಗ. ನೀವು ಏನನ್ನುತ್ತೀರಿ?

—ಬಿ. ಎಲ್. ಅಖಿಲಾ.

——o——

ಗುಪ್ತ ಜೇಬು

ಇನ್ನು ಸ್ವಸ್ಥ ಕುಳಿತರೆ ಮನೆಯಲ್ಲಿರುವದು ಅಶಕ್ಯವೆಂದು ಮನಗಂಡು, ತಗಣೆಗಳ ಸಂಹಾರಕ್ಕೆ ನಡಕಟ್ಟಿದೆವು, ನಾನು ಮತ್ತು ನನ್ನಾಕಿ.

ಒಲೆಯನ್ನು ಹಾಕಲು ತಯಾರಿಸಿದ ಅರ್ಲಿನಿಂದ ಗೋಡೆಗಳಲ್ಲಿಯ ತೂತುಗಳನ್ನು ಮೊದಲು ಮುಚ್ಚಿದೆವು. ಪಿನಾಯಿಲು ಹಾಕಿ ಮನೆಯನ್ನೆಲ್ಲ ಸಾರಿಸಿದ್ದಾಯಿತು. ತಗಣೆಗಳ ತವರ್ಮನೆಯಾದ ನಡುಮನೆಯ ಎಲ್ಲ ಗೋಡೆಗಳಿಗೆ ಸುಣ್ಣವನ್ನು ಹಚ್ಚಿದೆವು. ಅರಿವೆ, ಹಾಸಿಗೆಗಳನ್ನಿಷ್ಟೆ ಅಲ್ಲ, ಸರಿಸಾಡಲಿಕ್ಕೆ ಬರುವ ಎಲ್ಲ ವಸ್ತುಗಳನ್ನೂ ಬಿಸಲಿಗೆ ಹಾಕಿದೆವು. ದೇವರಿಗೆ ಶರಣು ಹೋದ ತಗಣೆಗಳ ಸಂಹಾರಕ್ಕೆಂದು ದೇವರ ಪೆಟ್ಟಿಗೆಯ ಸುತ್ತಲೂ, ಡಾಂಬರಿನ ಗುಳಿಗೆಗಳನ್ನಿಟ್ಟೆವು. ತಗಣೇ ವಿಷವನ್ನು ಕಳಿಹಿಸಿ ಕೊಡುವೆನೆಂದು ಮುನಿಸಿಪಾಲಿಟಿಯಲ್ಲಿಯ ನನ್ನ ಮಿತ್ರನು ಹೇಳಿದ್ದ. ಆದರೆ, ತಗಣಿಗಳಿಗಿನ್ನೂ ಮದ್ದು ಹೊರಟಿಲ್ಲ, ಎಂದು ಹೇಳಿ, ಇಲಿ ಮತ್ತು ಹೆಗ್ಗಣಗಳಿಗೆ ಹಾಕುವ ಪುಡಿಯನ್ನು ದಯಪಾಲಿಸಿದನು. ಅದನ್ನಾದರೂ ಕೂಡ ಅಲ್ಲಿಗಲ್ಲಿಗೆ ತೂರಿದೆವು.

ಗಂಧಕದ ಹೊಗೆಯಿಂದ ಮನೆಯನ್ನು ತುಂಬಿ, ನಾಳಿನ ಸುಖಕ್ಕಾಗಿ ಇಂದು ದುಃಖಪಡಬೇಕೆಂಬ ಮಾತಿನಿಂದ ಹೇಗಾದರೂ ಸಹಿಸಿಗೊಂಡೆವು ಅದನ್ನು. ಮತ್ತೂ ಕೈಗೆ ಬಂದ ತಗಣೆಗಳನ್ನು ಯಮ ಸದನಕ್ಕೆ ಕಳಿಸುತ್ತಲೇ ಇದ್ದಳು ನನ್ನಾಕೆ.

ಇಷ್ಟೆಲ್ಲ ಆದ ಬಳಿಕ ತಗಣೆಗಳು ಉಳಿಯುವುದು ಅಶಕ್ಯವೆನಿಸಿತು. ಸುದೈವದಿಂದ ಅವುಗಳಿಗೆ ಅಮೃತವನ್ನು ಮಾಡುವ ರೀತಿಯೂ ತಿಳಿದಿಲ್ಲ, ಕಾಯಕಲ್ಪದ ಕನಸೂ ಬಿದ್ದಿಲ್ಲ!

"ಇನ್ನೆಲ್ಲಿರಬಹುದು ಇವು?" ಎಂದಳಾಕೆ. ಈ ಪ್ರಶ್ನೆಯಲ್ಲಿ "ಇನ್ನೆಲ್ಲಿಯೂ ಇರಲಾರವು" ಎಂಬ ಅಭಿಮಾನದ ಉತ್ತರವೇ ಇತ್ತು ಸ್ಪಷ್ಟವಾಗಿ.

ಆದರೂ ಕೇಳಿದ ಪ್ರಶ್ನೆಗೆ ಉತ್ತರ ಕೊಡದಿದ್ದರೆ ಸೋತಂತೆ ಆಗುವುದೆಂದು ಭಾವಿಸಿ, "ನಿನ್ನ ಪೆಟ್ಟಿಗೆಯಲ್ಲಿರಬಹುದು ಇನ್ನೊಂದು ಕೋಟಿ" ಎಂದು ಬಾಯಿಗೆ ಬಂದದ್ದು ಹೇಳಿಬಿಟ್ಟೆ.

"ಹೌದು ನಿಮ್ಮ ಡ್ರಾವರಿನಲ್ಲಿರಬಹುದು ಬೇಕಾದರೆ ಮೂವತ್ತು ಮೂರು ಕೋಟಿ" ಎಂಬ ಬಿರುನುಡಿ ಬಂತು ಉತ್ತರ ರೂಪವಾಗಿ.

ಹೀಗೆ ಮಾತಿಗೆ ಮಾತು ಹತ್ತಿ ಕೊನೆಗೆ ಜಿದ್ದು ಕಟ್ಟಿದೆವು. ನನ್ನ ಖಾತೆಗಳಲ್ಲಿ (Departments) ತಗಣೆ ಸಿಕ್ಕರೆ ನಾನು ಸಿಗರೇಟ್ ಬಿಟ್ಟುಬಿಡಬೇಕು. ಅವಳ ಖಾತೆಗಳಲ್ಲಿ, ಅದು ಸಿಕ್ಕಿದಾದರ, ಸ್ನೋ ಪೌಡರ ಭತ್ತೆಗೆ ಗದೆ ಎಂದು ನಾನೂ ಒಪ್ಪಿದೆ; ನಲ್ಲೂ ಕೂಡ ಒಪ್ಪಿದಳು.

ಮೊನ್ನೆ ರವಿವಾರ ಗಂಜಿಗೆ ಅರಿವೆಗಳನ್ನು ಒಯ್ಯಲಿಕ್ಕೆ ಅಗಸರವ ಬಂದಿದ್ದ. ನನ್ನ ಉಣ್ಣೆಯ ಕೋಟಿನ ಕಾಲರಿನಲ್ಲಿಯ ಗುಪ್ತಜೇಬಿನಲ್ಲಿ ಎರಡು ಬೆರಳುಗಳನ್ನಿರಿಸಿ, ನನ್ನೆಡೆಗೆ ಓಡುತ್ತ ಬಂದಳು ನಲು. ಒಮ್ಮೊಮ್ಮೆ ನೋಟುಗಳನ್ನು ಆ ಕಿಸೆಯಲ್ಲಿಟ್ಟು ಮರೆಯುತ್ತೇನೆ. ಅಂತಹದೇ ಏನೋ ಪ್ರಸಂಗವೆಂದು ತಿಳಿದು, ಒಂದು ಸಣ್ಣ ಉಪನ್ಯಾಸವನ್ನು ಕೇಳುವ ಸಿದ್ಧತೆಯಲ್ಲಿ ಕುಳಿತೆ. ಆದರೆ ಜೇಬಿನಲ್ಲಿ ನೋಟುಗಳಿರಲಿಲ್ಲ; ನಾಲ್ಕು ದೊಡ್ಡ ತಗಣೆಗಳು ಮಾತ್ರ ಇದ್ದವು. ಅಂದಿನಿಂದ ನಾನು ಸಿಗರೇಟ್ ಬಿಟ್ಟಿರುವೆನಿಷ್ಟೇ ಅಲ್ಲ, ಕೋಟುಗಳಿಗೆ ಗುಪ್ತ ಜೇಬುಗಳನ್ನು ಮಾಡಿಸುವುದನ್ನೂ ಬಿಟ್ಟುಬಿಟ್ಟಿದ್ದೇನೆ.

—ಬಿ. ಜಿ. ಕುಲಕರ್ಣಿ, ಮುಂಬಯಿ.

ಜಾ ಪಾ ಳ

(ಎಂಬ ಹೊಸ ಚಿತ್ರದ ಪಬ್ಲಿಸಿಟಿ ಹಾಡು)

ಈಪರಿಯ ಹೊಲಸಾದ ಚಿತ್ರದಲಿ ಕಾಣೆ
ಪಾಪೀ ಜನ ಪ್ರಿಯ ಜಾಪಾಳಗಲ್ಲದೆ ॥ ಪ ॥

ಕಥೆಯ ಸೊಬಗಲಿ ನೋಡೆ ಕಾಕಮ್ಮನೇ ಲೇಸು
ಅಭಿನಯದಲಿ ನೋಡೆ ಅವಲಕ್ಷಣ !
ತಿಳಿಪ ನೀತಿಯ ನೋಡೆ ನಾಚುವರು ವಾನರರು
ಉಡಿಗೆ ತೊಡಿಗೆಯ ನೋಡೆ, ಹಣೆಯಬಡಿತ ! ೧

ಸಂಗೀತವನು ಕೇಳೆ ಕಿವಿಯ ಕೀವಿನ ಲಹರಿ
ಫೋಟತ್ವದಲಿ ನೋಡೆ, ಕಣ್ಣು ಬೇನೆ !
ಲಾವಣ್ಯದಲಿ ನೋಡೆ, ದೊಡ್ಡ ಕುಂಬಳಕಾಯಿ
ಆವಧೈರ್ಯದಿ ನಾನು ಒಳನುಗ್ಗಲಿ ? ೨

ಪರದೆಯಲಿ ಹಲ್ಕಿರಿವ ಮುದಿ ಮೂರ್ತಿಗಳ ಸಾಲು
ಹೆಂಡ, ಭಂಡರ ತಂಡ, ಸೂಳೆ, ಗೋಳು
ಗಂಡ ಹೆಂಡಿರ ಜಗಳ ಎಮ್ಮೆಗಳ ಹಿಮ್ಮೇಳ
ಮಿಗಿಲಾದ ಚಿತ್ರಗಳಿಗೀ ಭಾಗ್ಯವುಂಟೇ ? ೩

—ಚಿತ್ರಕವಿ.

ಕುಡುಕ

ಅವನು ಕುಡಿಯುತ್ತಿದ್ದ ಅಂತ ಎಲ್ಲರಿಗೂ ಗೊತ್ತಾಗುವಂತೆ ಖಾಲಿ ಸೀಸೆ ಕೂಡ, ಹಾಸಿಗೆಯಲ್ಲೇ ಬಿದ್ದಿತ್ತು. ನಾನು ಅಲ್ಲೇ ಕುಳಿತು ಎಲ್ಲವನ್ನೂ ನೋಡುತ್ತಿದ್ದೆ. ಅವನೂ ಹಾಸಿಗೆಯಲ್ಲೇ ಸುಸ್ತಾಗಿ ನಾಚಿಕೆ ಕೆಟ್ಟು ಬಿದ್ದಿದ್ದ. ಕಡೆಗೆ ಅವನಿಗೂ ಎದ್ದು ಹೋಗುವ ಮನಸ್ಸು ಬಂತು. ಅವನ ಕಾಲುಗಳು ನೆಟ್ಟಗೆ ನಿಲ್ಲಲಾರದೆ ತತ್ತರಿಸಿದುವು. ಮಂಡಿಗಳು ನಡುಗಿದುವು. ನಾಲಿಗೆ ಒಣಗಿತು. ಸೀಸದ ಕಡೆ ನೋಡುತ್ತಾ ಕಷ್ಟದಿಂದ ಎದ್ದ. ಎರಡು ಹೆಜ್ಜೆಗಳನ್ನಿಡುವ ಮೊದಲೇ ನೆಲದ ಮೇಲೆ ಕುಸಿದು ಬಿದ್ದ. ಆಗ ಅವನು ಹೊರಡಿಸಿದ ಅಸ್ಪಷ್ಟವಾದ ಶಾಪಗಳು ಯಾವು ಭಾಷೆಯವೋ, ಏನೋ, ಪರಮಾತ್ಮನೇ ಬಲ್ಲ. ಮತ್ತೆ ಎದ್ದು ಮುಂದೆ ಸಾಗಿ, ಆತುರ ಆತುರವಾಗಿ ಕೋಣೆಯ ನಡುವೆ ಇರಿಸಿದ್ದ ಮೇಜನ್ನು ಹಿಡಿದುಕೊಂಡು ಕೊಂಚಹೊತ್ತು ಏದುತ್ತಾ ಏದುತ್ತಾ ನಿಂತಿದ್ದ. ಬಹಳ ಹೊತ್ತು ಹಾಗೆ ನಿಲ್ಲಲಿಲ್ಲ. ಹೊರಗಿನ ಬಾಗಿಲಿಗೆ ಇನ್ನೂ ನೂರಾರು ದೂರವಿದ್ದ ಹಾಗೆ ತೋರಿತು, ಅವನಿಗೆ. ಆದರೂ ಮೇಜನ್ನು ಬಿಟ್ಟು ಬಾಗಿಲ ಕಡೆಗೆ ನಡೆದ. ಇನ್ನೇನು, ಕೋಣೆಯಿಂದ ಆಚೆ ಕಾಲಿಟ್ಟೇನು, ಎಂಬ ಭರವಸೆಯಿಂದ ಕಣ್ಣುಗಳು ಹೊಳಪೇರಿದುವು. ಆದರೆ, ಆ ಹೊಳಪು, ಬರಿಯ ಭ್ರಮೆಯಾಗಿ ಪರಿಣಮಿಸಿತು. ಕಾಲು ಕೆಳಗಿನ ಜಮಖಾನೆಯ ಸುರುಳಿಯೊಂದು ಅವನನ್ನು ಕೆಡವಿತು. ಕಿವಿ ಬಿರಿದಂತೆ ಕಿರಿಚುತ್ತಾ, ಅವನು ಅಲ್ಲೇ ಬಿದ್ದ. ಕೊಂಚ ಹೊತ್ತಾದ ಮೇಲೆ, ಅವನ ತಾಯಿ ಬಂದು ಅವನನ್ನೆತ್ತಿಕೊಂಡು ಹೋಗಿ, ಸೀಸೆಯಲ್ಲಿ ಹಾಲು ತುಂಬಿ ನಿಪ್ಪಲನ್ನು ಅವನ ಬಾಯಿಗಿಟ್ಟರು.

ಪತ್ರಿಕಾ ವಿಚಿತ್ರ

ನಿಮ್ಮ ಅಚ್ಚು ಮೆಚ್ಚಿನ ಚಿತ್ರಮಂದಿರದಲ್ಲಿ ಟಿಕೀಟು ಸಿಗದೆ ಜನರು ಹಿಂದಕ್ಕೆ ಬರುತ್ತಿದ್ದಾರೆ. ನೀವೂ ಬಂದು ನೋಡಿ.

* * *

ಸರಿಯಾಗಿ ಸ್ಕೂಲಿಗೆ ಬಂದವರಿಗೆ ದಿನಕ್ಕೆ ೬ ಕಾಸು ಸ್ಕಾಲರ್‌ಷಿಪ್ಪು.

—ಬೊಂಬಾಯಿ ಸುದ್ದಿ.

—ಈಗಲೇ ನಾವು ನಮ್ಮ ಮನೆ ಹುಡುಗರಿಗೆ ಸ್ಕೂಲಿಗೆ ಹೋಗುವಾಗಲೆಲ್ಲಾ ೬ ಕಾಸು ಸ್ಕಾಲರ್‌ಷಿಪ್ಪು ಕೊಡುತ್ತಿದೇವಲ್ಲಾ!

*

ಹೀಗಾದರೇನು ಗತಿ......?

ಕಾಗದ, ಯುದ್ಧಕ್ಕೆ ಬಹು ಮುಖ್ಯವಾದ ವಸ್ತು. ನಮ್ಮ ಪ್ರಚಾರ, ಅವರ ಅಪಪ್ರಚಾರ, ನಮ್ಮ ಪ್ರತಿ ಪ್ರಚಾರ, ಇವೆಲ್ಲಕ್ಕೂ ಕಾಗದ ಅತ್ಯಗತ್ಯ. ಅಲ್ಲದೆ, ಕಾಗದದಿಂದ ಹಲವಾರು ಯುದ್ಧಸಾಮಗ್ರಿಗಳನ್ನೂ ಮಾಡುವರಂತೆ. ಆದ್ದರಿಂದ ಪ್ರತಿಯೊಂದು ಕಛೇರಿಯಲ್ಲೂ ಆದಷ್ಟು ಕಡಿಮೆ ಕಾಗದವನ್ನುಪಯೋಗಿಸಿ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕೆಂಬ ಆಜ್ಞೆಗಳೂ, ಈ ಆಜ್ಞೆಗಳ ಒಳ ಮರ್ಮವನ್ನು ತಿಳಿಯ ಹೇಳುವ ಪ್ರಕಟಣೆಗಳೂ, ವ್ಯಾಖ್ಯಾನಗಳೂ, ಗ್ರಂಥಗಳೂ, ಹೀಗೆ ಅಪರಿಮಿತವಾಗಿ ಬೆಳೆದುಹೋಗಿರುವ ಮಿತವ್ಯಯ ಸಾಹಿತ್ಯವನ್ನು ನೆನಪಿನಲ್ಲಿ ಇಟ್ಟುಕೊಳ್ಳಲು, ಚಿತ್ರಗಳೂ, ಸುಲಭ ಸೂಚನೆಗಳೂ, ಸೂತ್ರಗಳೂ, ನೂರಾರು ಕಛೇರಿಗಳಿಂದ, ಹತ್ತಾರು ತಿಂಗಳಿಂದ ಹೊರಬೀಳುತ್ತಿವೆಯಷ್ಟೆ; ಈ ವಿಧವಾದ ಅವಿಶ್ರಾಂತ ಪರಿಶ್ರಮದಿಂದ ಕಾಗದದ ಉಳಿತಾಯ ಎಷ್ಟರಮಟ್ಟಿಗೆ ನಡೆದಿದೆ, ಎಂಬುದನ್ನು ಖಚಿತವಾಗಿ ದಿನೇ ದಿನೇ ತಿಳಿದುಕೊಂಡು, ಕಾಗದದ ವ್ಯಯದಲ್ಲಿ ಆದಷ್ಟು ಹಿಂದುವರಿಯುವ ಸಲುವಾಗಿ, ಇಷ್ಟರಲ್ಲೇ ಮತ್ತೊಂದು ಸರ್ಕಾರೀ ಆಜ್ಞೆ ಹೊರಡುವುದರಲ್ಲಿದೆಯೆಂದು ನಂಬಿಕೆಗರ್ಹವಾದ ವಠಾರಗಳಿಂದ ತಿಳಿದುಬಂದಿದೆ.

ಪ್ರತಿಯೊಂದು ಕಛೇರಿಯಿಂದಲೂ, ಪಂಚಾಯಿತಿ ಆಫೀಸಿನಿಂದಲೂ, ಪ್ರತಿ ದಿನವೂ, ಬೆಳಗಿನ ಟಪಾಲಿನಲ್ಲೇ ಕಾಗದದ ಹತೋಟಿ ಕಛೇರಿಗೆ ಒಂದು ವರದಿಯನ್ನು ಸಂಬಂಧ ಪಟ್ಟವರು ಕಳುಹಿಸಬೇಕಾಗಿದೆ. ಆ ವರದಿಯಲ್ಲಿ ಕೆಳಗೆ ಕಂಡ ವಿವರಗಳನ್ನು ಸ್ಪಷ್ಟವಾಗಿ ನಮೂದಿಸಬೇಕಾಗಿದೆ:

೧. ಆಫೀಸಿನಲ್ಲಿದ್ದ ಕಾಗದದ ಸ್ಟಾಕು. (ಬಣ್ಣ, ತೂಕ, ವಿಸ್ತಾರ) ಯಾರು, ಯಾವಾಗ, ಎಲ್ಲಿಂದ, ಹೇಗೆ, ಏತಕ್ಕೆ ತರಿಸಿದರು ಎಂಬ ವಿವರಗಳ ಸಹಿತ,

೨. ಹಿಂದಿನ ದಿನದ ಕಾಗದದ ಖರ್ಚು. (ಯಾರಿಗೆ, ಏತಕ್ಕಾಗಿ, ಎಷ್ಟು ಯಾವ ಭಾಷೆಗಳಲ್ಲಿ ಕಾಗದಗಳನ್ನು ಕಳುಹಿಸಲಾಯಿತು; ವಿಳಾಸದಾರರಿಗೆ ಹಿಂದೆ ಎಷ್ಟು ಕಾಗದಗಳನ್ನು ಬರೆಯಲಾಗಿದೆ; ಬರೆದದ್ದೆಷ್ಟು, ಟೈಪ್ ಮಾಡಿದ್ದೆಷ್ಟು, ಪ್ರತಿಗಳೆಷ್ಟು; ಬರೆಯುವುದಕ್ಕಿದ್ದ ಅಗತ್ಯವೇನು; ಯಾವ ಸರ್ಕಾರೀ ಆಜ್ಞೆಯ ಮೇಲೆ ಬರೆಯಲಾಯಿತು,—ಎಂಬ ವಿವರಗಳ ಸಹಿತ)

೩. ಉಳಿದಿರುವ ಕಾಗದ. (ಬಣ್ಣ, ತೂಕ, ವಿಸ್ತಾರ; ಯಾರ ವಶದಲ್ಲಿದೆ; ಇಟ್ಟಿರುವ ಪೆಟ್ಟಿಗೆಯ ಬೀಗದ ಲೀವರುಗಳು (Levers)ಎಷ್ಟು; ಬೀಗದ ಕೈಯನ್ನು ಆತನ ವಶಕ್ಕೆ ಕೊಟ್ಟಾಗ ಇದ್ದ ಸಾಕ್ಷಿಗಳ ಹೆಸರು, ಜಾತಿ, ವಯಸ್ಸು, ಅವರ ಸುತ್ತಳತೆ, ಮನೆಯ ಪ್ಲಾನು, ಮಕ್ಕಳ ಸಂಖ್ಯೆ, ಅಳಿಯಂದಿರ ಅಡ್ರಸ್ಸು; ಹತ್ತಿರದ ಪೋಲೀಸ್ ಸ್ಟೇಷನ್ನು, ಅಧಿಕಾರಿಯ ಹೆಸರು, ಹತ್ತು ಮೈಲಿ ಫಾಸಲಿನಲ್ಲಿರುವ ಕೇಡಿಗಳ ಲಿಸ್ಟು,—ಈ ವಿವರಗಳ ಸಹಿತ)

ಮೇಲ್ಕಂಡ ವರದಿಯ ಒಂದು ಪ್ರತಿಯನ್ನು ತಮ್ಮ ತಮ್ಮ ಆಫೀರಿನಲ್ಲಿಟ್ಟಿರುವುದಲ್ಲದೆ, ಅಮಲ್ದಾರರಿಗೂ, ಸಬ್ಡಿವಿಜರ್ ಆಫೀಸರ್‌ರವರಿಗೂ, ಡೀಸೀ ಯವರಿಗೂ, ಆರ್ಸೀಯವರಿಗೂ, ಐಜೀಯವರಿಗೂ, ಕಂಟ್ರೋಲರ್ ಆಫೀಸಿಗೂ, ಸ್ಟೇಷನರಿ ಆಫೀಸಿಗೂ ತಪ್ಪದೆ ರವಾನಿಸಬೇಕು. ಕಾಗದದ ಮಿತವ್ಯಯದ ದೃಷ್ಟಿಯಿಂದ ಈ ವರದಿಗಳು ಅತ್ಯವಶ್ಯಕ.

ಇಂಥಾ ಸುಗ್ರೀವಾಜ್ಞೆಯನ್ನೂ ಮೀರಿ ಕಾನೂನುಗಳ ಕಂಡಿಗಳಿಂದ ತೂರಬಲ್ಲ ಪತ್ರಭಕ್ಷಿಗಳನ್ನು ಸರ್ಕಾರದವರು ನಿರ್ದಾಕ್ಷಿಣ್ಯವಾಗಿ ಶಿಕ್ಷೆಗೆ ಗುರಿಪಡಿಸುತ್ತಾರೆ.

ಮೇಲೆ ಹೇಳಿದ ದೈನಂದಿನ ವರದಿಯ ವಿವರಗಳು ಸಂಬಂಧಪಟ್ಟವರೆಲ್ಲರಿಗೂ ತಿಳಿದಿರಬೇಕಾದದ್ದು ಅಗತ್ಯವೆಂದು ಸರ್ಕಾರದವರು ಪರಿಗಣಿಸುತ್ತಾರೆ. ಆದ್ದರಿಂದ ಪ್ರತಿಯೊಬ್ಬ ಪಂಚಾಯಿತಿ ಮೆಂಬರೂ, ಹತ್ತು ರೂಪಾಯಿಗೆ ಮೇಲ್ಪಟ್ಟ ನೌಕರರೂ ಮೇಲಿನ ವರದಿಯ ಪ್ರತಿಗಳಿಗೆ, ಬೇರೆ ಬೇರೆ ಸಹಿಮಾಡಿ, ತಾವು ಕಾಗದದ ಸ್ಟಾಕನ್ನು ಕಣ್ಣಾರೆ ಕಂಡಿರುವುದಾಗಿ ರುಜುವಾತುಕೊಟ್ಟು, ಮೇಲೆ ಸೂಚಿಸಿರುವ ಕಛೇರಿಗಳಿಗೆಲ್ಲಾ ಕಳುಹಿಸತಕ್ಕದ್ದು. ಅಲ್ಲದೆ, ಸಂಜೆ ಟಪಾಲಿಗೆ ಸರಿಯಾಗಿ ಸದರಿ ವರದಿಯನ್ನು ತಾವು ಕಳುಹಿಸಿರುವುದಾಗಿ, ಕಾಗದದ ಕಾರ್ಖಾನೆ ಮ್ಯಾನೇಜರಿಗೆ, ದಿನವೂ ಒಂದು ಪತ್ರವನ್ನು ಪ್ರತಿಯೊಬ್ಬರೂ ಕಳುಹಿಸಬೇಕೆಂದು ಆಜ್ಞೆಯಾಗುವ ನಿರೀಕ್ಷಣೆಯಿದೆ. —ಪತ್ರಾಚಾರಿ.

ಹಲಸಿನ ಬೀಜ

ಮೊನ್ನೆ ಮದ್ದೂರಲ್ಲಿ ಮೂರು ಜನ ಗೌಡರು ನಮ್ಮ ಗಾಡಿಯೊಳಕ್ಕೆ ನುಗ್ಗಿದರು. ರೈಲು ಹೊರಡುತ್ತಲೂ ಅವರು, ಹಲಸಿನ ತೊಳೆ ತಿನ್ನಲು ಪ್ರಾರಂಭಿಸಿಬಿಟ್ಟರು. ಗತ್ಯಂತರವಿಲ್ಲದೆ ನಾನು, ಉಗುಳು ನೀರು ಕುಡಿದದ್ದೂ ಕುಡಿದದ್ದೇ! ಒಬ್ಬೊಬ್ಬರೂ ಹತ್ತು ಹತ್ತು ತೊಳೆ ತಿಂದ ಮೇಲೆ, ಅವರು, ನನ್ನ ಕಡೆ ತಿರುಗಿ, ನನ್ನನ್ನು ಮಾತನಾಡಿಸಿ ನನ್ನ ಕೈಗೆ ಹಲಸಿನ ಬೀಜಗಳನ್ನು ಕೊಟ್ಟರು. ನನಗೆ ರೇಗಿತು, "ಬೇಡ" ಅಂದೆ. ಅದಕ್ಕೆ ಅವರಲ್ಲೊಬ್ಬ, "ನೀವು ದೊಡ್ಡ ಹಟ್ಟಿ ಚಿಕ್ಕ ಹೈದನ ಸಮಾಚಾರ ಕೇಳಿಲ್ವಾ"—ಅಂದ.

"ಇಲ್ಲ" ಅಂದೆ.

"ನಮ್ಮ ಮಳೂರಲ್ಲಿ, ದೊಡ್ಡಟ್ಟಿ ಗೊತ್ತಿಲ್ವಾ.......ಹದಿನಾರು ಕಂಬದ್ದು, ತೊಟ್ಟಿ ಮನೆ.......ಅವರ ಮನೆ ಚಿಕ್ಕ ಹೈದ........"

"ಥೂ, ನಿನ್ನ ಮನೆ........ಚಿಕ್ಕ ಹೈದ ಯಾಕೋ ಒಸಿ ಹಂಗಾದ, ಹಿಂಗಾದ, ಕುಂತ, ಕೆರೆದ, ಕೊರಗಿದ, ಮಲಗಿದ ....ಒಸಿ ಒಸಿ ಕೆಮ್ಮಿದ... ....ಮೆಲ್ಲಗೆ ಕಂಬಳಿ ಹೊದ್ಕೊಂಡು ಮುಸು ಎಳ್ಕೊಂಡು ಮಲಗೇ ಬಿಟ್ಟ ......"

"ಸುಂಕೆ ಸಾವಿರ ಮಾತು ಯಾಕೆ? ಡಾಕ್ಟರ್ ಬಂದರು........ನಾಲಿಗೆ ಬಣ್ಣ ನೋಡಿದರು....ಕೊಳವಿ ಕೊಟ್ಟರು, ಬಾಯಿಗೆ .. ಎದೆಯೊಳಗಿಂದ ತಮ್ಮ ತಮ್ಮ ಕಿವಿಗೆ ಉಸಿರೆಳೆದುಕೊಂಡರು ...ಅದೆಂತಾದ್ದೋ ಇಂಗ್ಲಿಷ್ ಕಾಯಿಲೆ ಅಂತಂದ್ರು ... ಸೀಸೆ ತುಂಬ ಕೆಂಪೌಷಧೀನ ಕುಲುಕಿ, ಕುಲುಕಿ, ಹುಯ್ದರು, ಹೈದನ ಹೊಟ್ಟೇಗೆ...."

"ಅದನ್ನೇ ಹೇಳೋಣಾಂತ ಇದ್ದೆ, ನಾನು........ಹಾಳು ಹೊಟ್ಟೆ, ಎಲ್ಲಾ ನೂವೇ ಈಚೆಗೇ ಎಸೆದುಬಿಟ್ಟಿತು. ಸರಿ, ಇನ್ನೇನು ಸಂಜೆಯೊಳಗೆ ಕೈಕಾಲು ತಣ್ಣಗಾಗುತ್ತೆ ಅಂತ ಹೇಳಿಬಿಟ್ಟರು, ಡಾಕ್ಟ್ರು........ಬುದ್ಧಿವಂತರು........"

"ಥೂ! ನಿನ್ನ ಮನೆ ಹಾಳಾಗ........ಹಜಾರದಲ್ಲಿ ಕುಂತುಕೊಂಡು ಡಾಕ್ಟ್ರು ಬೂಟ್ಸು ಕಟ್ಟಿಕೋತಿದ್ದಾರೆ, ಕಾಲಿಗೆ........ಆಗ ಚಿಕ್ಕ ಹೈದನ ಅಕ್ಕ........ಸಣ್ಣ ತಿಮ್ಮಿ ಬಂದಳು ಬಾಗಿಲಿಗೆ........"

"ಸುಂಕೆ ಸಾವಿರ ಮಾತು ಯಾಕೆ? ಅವಳು ಹೇಳಿದಳು ಡಾಕ್ಟ್ರರಿಗೆ, ಹಲಸಿನ ಬೀಜದ ಹುಳಿ ಮಾಡಿದೀನಿ, ಇವತ್ತು........ಚಿಕ್ಕ ಹೈದನ ಮೂಗಿಗೆ ವಾಸ್ನೆ ಬಡಿದು ಬಿಡ್ತು......ಎರಡು ಹೋಳು ಹಾಕು ಅಂತಾನೆ, ಬಾಯಿಗೆ ಹಾಕಲಾ ಅಂದಳು....."

"ಹೆಂಗಿದ್ರೂ ಸಾಯ್ತಾನೆ........ಬೇಕಾದ್ದು ತಿಂದು ಸುಖವಾಗಿ ಸಾಯಲಿ ಅಂದ್ರು ಡಾಕ್ಟರು........ಅಳುತ್ತಾ, ಪಾಪ, ಅವಳು ಅಡಿಗೆ ಮನೆಗೆ ಹೋಗಿ ಎರಡು ಬೀಜ ತಂದು ಊದಿ ಆರಿಸಿ, ಚಿಕ್ಕ ಹೈದನ ಬಾಯಿಗೆ ಹಾಕಿದಳು. ಅವ ಅದನ್ನು ಗುಳುಂ ಅಂತ ನುಂಗಿಬಿಟ್ಟ........"

"ಥೂ!........ನಿನ್ನ ಮನೆ ಹಾಳಾಗ........ಇನ್ನೂ ಕೊಂಚ ತತ್ತಾ ಅಂದ. ಸರಿ, ಇನ್ನೂ ಒಂದೆರಡು ತಂದ್ಳು........ಸಾಲದು ಅಂದ ......ಇನ್ನೂ ಏಳೆಂಟು ತಂದು ಬಾಯೊಳಕ್ಕೆ ಹಾಕಿದಳು........"

"ಸುಂಕೆ ಸಾವಿರ ಮಾತ್ಯಾಕೆ?—ಸುಮಾರು ನೂರು ಬೀಜ ನುಂಗಿದ ...... ಡಾಕ್ಟರು ಅಲ್ಲೇ ನೋಡ್ತಾ ನಿಂತಿದ್ದರು. ಕೊನೆಗೆ, ಎರಡು ಸಾರಿ ಆಕಳಿಸಿದ...... ಕೊಂಚ ಕೆಮ್ಮಿದ........ಹಾಗೇನೇ ಕಣ್ಣು ಮುಚ್ಚಿಕೊಂಡು........"

"ಆಗ ಡಾಕ್ಟರು ಅಂದ್ರು........ಆಯಿತು ಚಿಕ್ಕ ಹೈದನ ಗತಿ, ಪೂರೈಸಿತು..... ಗುದ್ದಲಿ, ಪಿಕಾಸಿ, ತೊಗೋಳಿ, ಅಂತ. ಆಗ ಚಿಕ್ಕಹೈದನ ಮುಖದಲ್ಲಿ ಕೊಂಚ ನಗು ಬಂತು........"

"ಥೂ! ನಿನ್ನ ಮನೆ ಹಾಳಾಗ.........ನಾನು ಸತ್ತಿಲ್ಲ, ಸ್ವರ್ಗದಲ್ಲಿದೇನೆ........ ಹಲಸಿನ ಬೀಜದ ರುಚಿಗೆ ಕಣ್ಣು ಮುಚ್ಚಿದೆ, ಅಷ್ಟೆ........ಅಂದ........ಬೆಳಗ್ಗೆ ಎದ್ದು ಹಾಸಿಗೆ ಸುತ್ತಿಟ್ಟು ಭಾವಿಯಿಂದ ನೀರು ಸೇದಿ, ಒಲೆ ಹೊತ್ತಿಸಿ, ನೀರು ಕಾಯಿಸಿ, ಚೆನ್ನಾಗಿ ಸ್ನಾನ ಮಾಡಿ, ಚಿಕ್ಕ ಹೈದ........"

"ಸುಂ ಸಾವಿರ ಮಾತ್ಯಾಕೆ?.........ಮಾವನ ಮನೇ ಇರೋ ಹಳ್ಳೀಗೆ ನಡ್ಕೊಂಡೇ ಹೊರಟ...........ನೋಡಣ್ಣ—ಹಲಸಿನ ಬೀಜ ಅಂದ್ರೆ, ಎಂಥಾ ಚಿನ್ನದಂಥಾ........"

ಹಾ-ಹೀ-ಹೂ

ಎಷ್ಟಾದರೂ, ಪರಂಗಿಯುವರಿಗಿಂತ, ನಮ್ಮವರೇ ವಾಸಿ. ನಡೆಯಲ್ಲಿ ಸಿಥಾನ, ನುಡಿಯಲ್ಲಿ ಮಿತಿ ನಮ್ಮವರಷ್ಟು ಪರಂಗಿಯುವರಿಗಿಲ್ಲ. ಒಂದೇ ಒಂದು ಅಕ್ಷರದ ಮಾತುಗಳು ನಮ್ಮ ಕನ್ನಡದಲ್ಲಿರುವಷ್ಟು ಅವರ ಮಾತಿನಲ್ಲಿಲ್ಲ. ಹೀ, ಷೀ, ವೀ, ಬೀ, ಸೀ, ಟೀ, ಕೀ, ಅಂತ ಅವರೂ ಅನ್ನಬಹುದು. ಆದರೆ, ಅವರ ಹೂವಿಗೂ ನಮ್ಮ ಹೂವಿಗೂ ಬಹಳ ವ್ಯತ್ಯಾಸವಿದೆ. ಅವರು "ಸೀ" ಅಂದರೆ ನಮಗೆ ನಾಲಿಗೇಲಿ ನೀರೇ ಬರುತ್ತೆ. ಅವರು ಬರೀ 'ಹೀ' ಅಂತಾರೆ; ನಾವು ಹೀಯಾಳಿ ಸುತ್ತೀವೆ. ಅವರು 'ಟೀ' ಅಂದರೆ ನಾವು 'ಚಾ' ಅಂತೇವೆ. 'ವೀ' ಅಂದರೆ, ನಮ್ಮಲ್ಲಿ, ನಾವಲ್ಲ,—ಪಕ್ಷಿ! 'ಬೀ' ಅಂದರೆ, ಪರರಿಗೆ ಜೇನು ಶೇಖರಿಸಿಟ್ಟು ಬದುಕುವ ಹುಳುವಲ್ಲ, 'ಸಾಯುವುದು' ಎಂದರ್ಥ ನಮ್ಮಲ್ಲಿ. 'ಕೀ' ಅಂದರೆ ಕನ್ನಡದಲ್ಲಿ, ಕಿವಿಗೆ ಕೊಂಚ ಕಷ್ಟವೇ! ಹೀಗೆ ತನ್ನದೇ ಆದ ಒಂದು ವಿಶೇಷ ಜಾಣತನದಿಂದ, ಕನ್ನಡ ಜನ, ಏಕಾಕ್ಷರ ವಾಕ್ಸಂಪತನ್ನು ಅಭಿವೃದ್ಧಿ ಪಡಿಸಿ ಕೊಂಡಿದೆ.

ಪ್ರಾಣಿಗಳ ಸ್ವರಗಳನ್ನು ಅನುಕರಿಸುವ—ಮೇ, ಬ್ಯಾ, ಕೀ, ಗೀ, ಗೂ, ಕೂ, ಕಾ, ಜಾ ಎಂಬ ಮಾತುಗಳನ್ನೂ ಮನುಷ್ಯನ ನಾನಾ ರೀತಿಯ ಭಾವಗಳನ್ನು ಹೊರಗೆಡಹುವ ಂ ಆ ಊ ಓ ಹಾ ಹಿ ಮುಂತಾದುವನ್ನು ನಾವು ಲೆಕ್ಕಕ್ಕೆ ಸೇರಿಸಿ ಕೊಳ್ಳದೆ ಇದ್ದರೂ ಛೆ ಛೂ ಛಿ ಜೆ ಜೈ ಜೋ ಏ ಲೇ ಹೋ ಕೋ ಥೂ ಎಂಬ ಶಬ್ಧಗಳನ್ನು ಸದ್ಯಕ್ಕೆ ಒತ್ತರಿಸಿದರೂ, ಏಕಾಕ್ಷರ ಪದಗಳು, ಕನ್ನಡದ ಬತ್ತಳಿಕೆ ಯಲ್ಲಿ ನಮಗೆ ಇನ್ನೂ ಇದ್ದೇ ಇವೆ. ಹೇಂಕರಿಸುವುದು, ಭೋಂಕನೆ ಹೂಗುಟ್ಟು ವುದು, ಹಾಹಾಕಾರಮಾಡುವುದು, ಥೂಕರಿಸುವುದು, ಛೀಮಾರಿ ಮಾಡುವುದು, ಹೀಯಾಳಿಸುವುದು, ಸೀವಾಳಿಸುವುದು, ಜೂಗಳಿಸುವುದು,—ಇವೆಲ್ಲ ಕನ್ನಡಿಗರ ಪ್ರತ್ಯೇಕವಾದ ಚರ್ಯೆಗಳು.

'ತಾ' ಅಂದರೆ 'ತೀ'ಯನ್ನು ಕೊಡುವವನನ್ನೂ 'ಸಾ' ಎಂದು ಕನ್ನಡದಲ್ಲಿ ಹೇಳಿದರೆ, ಇಂಗ್ಲೀಷು ಅಂತ ವಾದಿಸುವವನನ್ನೂ ಕೂಡಲೇ 'ಹೇ' ಆಸ್ಪತ್ರೆಗೆ ಕಳಿಸಬೇಕು (ಕಿಟ್ಟೆಲ್ ನೋಡಿ, ಹೇ ಅಂದರೆ ಹುಚ್ಚು!). ನಾ ನೀ ಅಂತ ಸುಮ್ಮನೆ ಕಾಲವಿಳಂಬ ಮಾಡಿ ಪ್ರಯೋಜನವಿಲ್ಲ. 'ಜೋ'ಮಾಲೆ, 'ಸೋ'ಮಾರಿ, 'ಕೋ' ದಂಡ, 'ಮೂ'ದೇವಿ, ಇವೆಲ್ಲ ಏನು ಅಂತ ಪ್ರತಿಯೊಬ್ಬ ಕನ್ನಡಿಗನಿಗೂ ಗೊತ್ತು. ಠೂ ಭೂ ಭೋ ಛೀ ಭಾ—ಇವಕ್ಕೆಲ್ಲಾ ಬೇರೆ ಬೇರೆ ಅರ್ಥವಿದೆ. (ಕಿಟ್ಟೆಲ್ ನೋಡಿ). 'ಕೂ' ಅಂದರೆ ಯಾವ ಜಾತಿಯ ಹೆಂಗಸು? 'ಜಾ'ಕಾಯಿ ಅಂದರೆ ಯಾವುದು? 'ಯಾ' ಪಾಟಿ ಅಂದರೆ ಏನು? ಊ, ರೂ, ವಾ, ಸೀ, ಸೋ, ಇವುಗಳ ಅರ್ಥವನ್ನೂ ತಿಳಿದುಕೊಳ್ಳಿ. ಆ ಮೇಲೆ ಎಲ್ಲರ ಮುಂದೂ ಎದೆ ತಟ್ಟಿ ನಿಂತು, "ಹೋಗೋ ಹೋಗೋ" ಅಂತ "ಗೋ"ಗರೆಯಿರಿ—!

"ನನ್ನ ಕಾಫಿ"

—o—

ಕಟ್ಟಿಕೊಂಡ ಹೆಂಡತಿಯನ್ನೂ ಬಿಟ್ಟೇನು! ಇರುವ ಮಕ್ಕಳೂ ಬೇಡ! ಕಾಶಿಯ ಮಣ್ಣನ್ನು ರಾಮೇಶ್ವರದಲ್ಲಿ ಬೇಕಾದರೂ ಬಿಟ್ಟುಬಂದೇನು! ಆದರೆ ಬೆಳಗ್ಗೆ ೮ ಘಂಟೆವರೆಗೂ ಕಾಫಿ ಆಗಲಿಲ್ಲವೆಂದರೆ ನನಗೆ ತಡೆಯಲಿಕ್ಕೆ ಅಸಾಧ್ಯ. ಕಾಫಿ ಎಂದರೆ—ಭರ್ಜರಿಯಾಗಿ ಸಾಕಮ್ಮನ ಹುಡಿ ಆಗಬೇಕೆಂದಿಲ್ಲ. ಸಕ್ಕರೆ ಸೇರಿಸಬೇಕಾಗಿಲ್ಲ. ತೂಕ ಮಾಡಿದಂತೆ ಭಾರತೀಯರ ಬಣ್ಣಬರುವವರೆಗೂ ಹಾಲು ಹಾಕಬೇಕಾಗಿಲ್ಲ. ಕುಡಿಯಲಿಕ್ಕೆ ಪಿಂಗಾಣಿ ಪಾತ್ರೆಯೇ ಬೇಕಾಗಿಲ್ಲ! ಬೇಕಮ್ಮನ ಪುಡಿಯಾದರೂ ಆಯಿತು. ಬೆಲ್ಲದ ಕಾಫಿಯಾದರೇನಂತೆ? ಇನ್ನು ಹಾಲಿನ ಮಾತೇನು? ನೀರಿಗೆ ಹಾಲಾದರೂ ಸರಿ, ಹಾಲಿಗೆ ನೀರಾದರೂ ಸರಿ. ಪಾತ್ರೆಯ ಪರಿವೇ ಇಲ್ಲ. ಪಂಚಪಾತ್ರೆ ಆದರೆ ಸಂತೋಷವೇ? ಇಲ್ಲವೇ ಕೈ ಬೊಗಸೆಯಲ್ಲಾದರೂ ಕುಡಿದೇನು!

ಮೀಸೆಗೆ ಬೇವಿನೆಣ್ಣೆ ಏಕೆ ಬಳಿಸಬೇಕು? ಸ್ನಾನ ಮಾಡುವವನಿಗೆ ಬಟ್ಟೆ ಬಿಚ್ಚುವನೊಬ್ಬನೇ? ನಾಗರಿಕತೆಯ ಹೆಸರಿನಲ್ಲಿ ನಡೆಯುತ್ತಿರುವ ಈ ಅನಾಗರಿಕ ಚೇಷ್ಟೆಗಳಿಗೆ ಗಾವುದ ದೂರ ನಾನು. ಕುಡಿಯುವುದೇನು ಕಾಫಿಯೋ ಕಪ್ಪೋ? ಎರಡೂ ಬಿಟ್ಟು ಸಾಸರ್ರೋ. ಸಿಹಿ ಏನು ಸಕ್ಕರೆಗೊಂದಕ್ಕೇನೇ ಗುತ್ತಿಗೆಯೇ? ಭಾರತೀಯರಿಗೆ ಬರೇ ಬೆಲ್ಲವೇ ಸಾಕು. ಹಾಲಿಲ್ಲದ ಕಾಫಿಯೇ ನಿಜವಾದ ಕಾಫಿ. ಕಾಫಿಗೆ ಯಾವ ಗುಣವಿರಲಿ, ದುರ್ಗುಣವಿರಲಿ, ಹಾಲು ಹಾಕಿದರೆ ಅದು ಕಾಫಿಯಾಗಿ ಮಾತ್ರ ಉಳಿಯುವುದಿಲ್ಲ. ಹಾಲು ಅಂತಹ ದುಷ್ಟ ಪ್ರಾಣಿ. ದುರ್ಜನರ ಸಂಗದಲ್ಲಿ ಸಜ್ಜನನು ಕೆಟ್ಟಂತೆ. ಹಾಲಿನ ಜೊತೆಗೆ ಸೇರಿದ ಕಾಫಿಯ ಲಕ್ಷಣ ಅವಲಕ್ಷಣವೇ! ಬೆಣ್ಣೆಯಾದರೂ ಸೇರಿಸಿಕೊಂಡು ಕುಡಿದೇನು! ಹಾಲು ಮಾತ್ರ ಬೇಡ!

ನಾನು ಕಪ್ಪು. ನನ್ನ ರಾಧೆ ನನಗೂ ಒಂದು ಕೈ ಮೀರಿಸಿದಂತೆ—ಅಚ್ಚ ಕಪ್ಪು. ನನ್ನ ಕಾಫೀನೂ ಕಪ್ಪೇ. ಆ ಕಾಫಿಗೆ ಹಾಕುವುದು ಕರಿಯ ಸಂತೆ (Black market) ಯಲ್ಲಿ ತಂದ ಕರಿಯ ಬೆಲ್ಲ. ಈ ಕೃಷ್ಣಮಯವೇ ಜಗದಾನಂದ. ಕೃಷ್ಣಂ ಕೃಷ್ಣಸ್ಯ ರಮ್ಯತೇ ಅಲ್ಲವೇ!

ಆದರೆ ಎಲ್ಲೆಡೆಯಲ್ಲೂ ನಾ ಹೇಳಿದಂತೆ ಕುಣಿಯುವರು ಬೇಕಲ್ಲ. ನನ್ನ ಮನೆಯಲ್ಲೇ ಕೇಳುವುದಂತಿದೆ. ಬೇರೆಡೆ ಏನು? ಹಾಲು ಬೇಡವೆಂದು ರಾಧೆಗೆ ಸಾವಿರ ಸಲ ಹೇಳಿದ್ದೇನೆ. ಕೇಳಿದರೆ ತಾನೆ? ಹಾಲಿಲ್ಲದ ಕಾಫಿ ಮೈಗೆ ಒಗ್ಗುವುದಿಲ್ಲ ಎಂದು ಸುಳ್ಳು ಹೇಳಿ ಕುಡಿಸುತ್ತಾಳೆ. ಅವಳ ಬಾಯಿಗೆ ಬಿನ್ನಾಣವೇ ಇಲ್ಲ.

Indian Coffee Cess Committee ಯವರಿಗಾಗಿ ನಾನಿದನ್ನು ಬರೆಯುತ್ತಿಲ್ಲವೆಂದು ಮೊದಲೇ ತಿಳಿಸಲು ಬಯಸುತ್ತೇನೆ.

ಬ್ರೇಕ್ ಅಂತೂ ಮೊದಲೇ ಇಲ್ಲ. ಗಂಡಸಾದರೂ ಬಡಪಾಯಿ ಹೆಂಡತಿ ಮೇಲೆ ನನ್ನ ಹಕ್ಕು ಸ್ಥಾಪಿಸಿಕೊಳ್ಳುವ ಗೈರತ್ತೇ ಇಲ್ಲ ನನಗೆ. ಅದಕ್ಕೆ ಕಾರಣ ಅಧೈರ್ಯ ವೆಂದಲ್ಲ! ಹೆಂಗಸರೊಡನೆ ಜಗಳವಾಡಲಿಕ್ಕೇನೇ ಗಂಡಸರಿಗೆ God ಗೈರತ್ತು ಕೊಟ್ಟಿರೋದು. ಬೇರೆ ಕೆಲಸವಿಲ್ಲವೇ?

ಎಂಟು ಗಂಟೆಗೆ ಕಾಫಿಯು ಪ್ರವೇಶವಾಗಬೇಕು ಎಂದೆನಲ್ಲಾ! ಇದು ಮಾತ್ರ ಹೇಳಿ ಕೇಳಿದಂತಿರಬೇಕು. ಸ್ವಲ್ಪ ಹೊತ್ತಾದರೂ "ಸೀದಂತಿ ಮಮ ಗಾತ್ರಾಣಿ, ಮುಖಂ ಚ ಪರಿಶುಷ್ಯತಿ." ಸರಿ! "ಲ್ಲೀ........" ಎಂದು ನಾದ ದನಿಯೊಂದು ಹೊರಬೀಳುತ್ತದೆ. ವಿಜ್ಞಾನಿಗಳು ಹೇಳುವಂತೆ ಇಲ್ಲೇ ಸುರುಳಿಯಾಗಿ ಸೊನ್ನೆ ಯಾಗಿ, ಸಂಪೂರ್ಣವಾಗಿ ಸರ್ವ ದಿಕ್ಕಿಗೂ ಹೊರಡುತ್ತವೆ. ½ ಸೆಕೆಂಡಿನಲ್ಲಿ ಈ ನಾದ ರಶ್ಮಿ ರಾಧೆಯ ಕಿವಿಯ ರಿಸೀವರಿಗೆ ತಗಲಿ ಮಾರ್ದನಿ ಕೊಡುತ್ತದೆ. "ಇನ್ನೂ ಹಾಲಿನವನು ಬಂದಿಲ್ಲಾ........"

"ಇನ್ನೂ ಹಾಲಿನವನು ಬಂದಿಲ್ಲಾ........" ಬಾಯಲ್ಲಿ ವಾಕ್ಯ ಮೆಲ್ಲುತ್ತಾ, ಮೆಲಕುತ್ತೇನೆ. ಸುಲಭವಾಗಿ ಒಡೆಯಲು ಸಾಮಾನೇನಾದರೂ ಇದೆಯೋ ಎಂದು ಸುತ್ತಲೂ ಕಣ್ಣು ಸುತ್ತಾಡುತ್ತೆ. ಏನಾದರೂ ದೊರಕಿತೆಂದರೆ ಸಿದ್ಧ—ಆಕಸ್ಮಿಕ ಮರಣ (Accidents). ಪೇಪರ್ ವೇಟ್ ಆಗಲಿ, ಫೌಂಟನ್‌ಪೆನ್ ಆಗಲಿ— ಏನಾದರೊಂದು ಆಹುತಿಯಾಗಲೇ ಬೇಕು. ಏನೂ ಸಿಗದಿದ್ದರೆ ಹಣೆಗೂ ಅಂಗೈಗೂ ಯುದ್ಧ.

"ಇದೇನಿದು? ಬೆಕ್ಕು ಬಂದಂತಿದೆ" ಎಂದು ಗೋಪಾಲನೋ ರಾಮನೋ ಬಂದಿರೆನ್ನಿ. ಅವರಿಗೂ ಈ ಗತಿಯೇ" ಹಾಲಿನವನ ಮೇಲಿನ ಕೋಪ ತೀರುವ ವರೆಗೆ. ಆ ಹುಡುಗರೋ ನನಗಿಂತ ಘಾಟಿಗಳು. ಹಾಲಿನವನು ಬಂದಿಲ್ಲವೆಂದು ತಿಳಿದ ಕೂಡಲೇ ಅ ರೊಳಗೆ ಮನೆಯಿಂದ ಪರಾರಿ! ಯಾವುದೋ 'ಅತ್ತೆಯ ಮನೆ' ಯಲ್ಲಿ ಕಾಫಿಯ ಸೇವೆ ನಡೆಸುತ್ತಿರುತ್ತಾರೆ. ಅವರಿಗೆಲ್ಲಾ ಗೊತ್ತು! ಮನೆ ಯಲ್ಲಿದ್ದರೆ ಉಳಿಗಾಲವಿಲ್ಲವೆಂದು.

ಅಚೇತನ ವಸ್ತುಗಳಿಂದ ಚೇತನ ಸಾಮ್ರಾಜ್ಯಕ್ಕೆ ನನ್ನ ದೃಷ್ಟಿ ಸಾಗುತ್ತದೆ. ಎದುರಿಗೆ ಯಾರು ಬಂದರೂ ಅವರಿಗೆ ವಿಶೇಷ ನಾಮ. ಚಿಕ್ಕ ಹುಡುಗ 'ಸಾಕಪ್ಪ' ನಿಂದ ಹಿರಿಮಗ ಹರಿಯವರೆಗೆ ನನ್ನ ಬೈಗಳ ಉರಿಗೆ ಬೆಣ್ಣೆ ಹಾಕಿದಂತೆ ಅವರೆಲ್ಲರೂ ಸುಮ್ಮಗಿರುತ್ತಾರೆ. ಮರುಮಾತನಾಡಿದರೆ ತಾನೆ ಇನ್ನೂ ಬಯ್ಯಲು, ಹೆಚ್ಚಾದರೆ ಹೊಡೆಯಲು, ಎಲ್ಲವೂ According to plan ಇದ್ದಂತೆ.

ನಾನು ಸಾಮ್ಯವಾದಿ. ಒಬ್ಬರನೇ ಬಯ್ಯುವ ನಿಯಮ ನನಗಿಲ್ಲ. ಎಲ್ಲರಿಗೂ ಸಮನಾಗಿ ಹಂಚಿಬಿಡುತ್ತೇನೆ. ಒಬ್ಬನ ತಪ್ಪಿಗೆ ಮನೆಯ ಮಂದಿಗೆಲ್ಲಾ ಶಿಕ್ಷೆ. ಕಡೆಗೆ—ಶಾಂತನಾಗಿರುವಾಗ—ಇವರನ್ನೆಲ್ಲಾ ಬಯ್ದದಕ್ಕೆ ನನ್ನನ್ನು ನಾನೇ ಬಯ್ದುಕೊಳ್ಳುವುದೂ ಉಂಟು. ಆಗ ವೃತ್ತ ಪೂರ್ಣವಾಗುತ್ತದೆ.

ಬಯ್ದು ಸುಸ್ತಾದರೆ ಮಲಗುವ ಮನೆಗೆ ಹೋಗಿ ಕೈಕೇಯಿಯ ಪಾರ್ಟ್ ಮಾಡುತ್ತೇನೆ. ಕಂಡುದೆಲ್ಲಾ ಬಯ್ಯಲು ಪ್ರಾರಂಭ. ಕಡೆಗೆ ಗೊಣಗಾಡುತ್ತಾ—ನಮ್ಮ ಅಜ್ಜಿಯ ನೆನಪು ಬರುವವರೆಗೆ.......

ಸ್ವಲ್ಪ ಶಮನವಾದ ಮೇಲೆ ರಾಧೆ ಬರುತ್ತಾಳೆ. ನಾನು ಕೆಡಿಸಿದ್ದನ್ನೆಲ್ಲಾ ಹದಮಾಡಲು ನನ್ನ ತಲೆಗೆ ನೀರು ತಟ್ಟಲು, ಅಶಾಂತಿ ಶಮನಮಾಡಲು. ಆಗಲಾದರೂ ಬರಿಯ—ಹಾಲಿಲ್ಲದ ಕಾಫಿ ತರುತ್ತಾಳೆಯೇ? ಇಲ್ಲ. ನಾನು ಮೌನ ಸತ್ಯಾಗ್ರಹಕ್ಕೆ ಆರಂಭಿಸುತ್ತೇನೆ. ಅವಳು ಮ್ಯಾಕ್ಸವೆಲ್‌ರನ್ನೇ ಮೀರಿಸುತ್ತಾಳೆ. ಈ ಸತ್ಯಾಗ್ರಹವನ್ನು ಎದುರಿಸುವುದರಲ್ಲಿ ನನ್ನ ಮುಖ ನೋಡಿದರೆ ಕೋಪ ಬಂದಿದೆಯೆಂದು ತಿಳಿಯಬಹುದು. ಅವಳ ಮುಖ ನೋಡಿದರೆ ಕೋಪವೋ, ಶಾಂತವೋ, ನಗೆಯೋ, ನಾಚಿಕೆಯೋ, ಅಸಹ್ಯವೋ, ಆಶ್ಚರ್ಯವೋ ಏನೂ ಗೊತ್ತಾಗುವುದಿಲ್ಲ.

ಈ ವೇಳೆಗೆ 9 ಘಂಟೆ, ಮನೆ ಜೂ (Zoo) ಆಗುತ್ತದೆ. ಎಲ್ಲಾ ಪ್ರಾಣಿಗಳೂ ಹಸಿವಾದಾಗ ಒಮ್ಮೆಗೇ ಕಿರಚಿದರೆ ಆಗುವ ದನಿ. ಪುಟ್ಟ ಮಕ್ಕಳೆಲ್ಲಾ ಅರಚಲು ಆರಂಭಿಸುತ್ತಾರೆ. ತಮ್ಮ ಪಾಲಿನ ಹಾಲು ದೊರೆಯಲಿಲ್ಲವೆಂದು!

ಈ ಸಂದರ್ಭದಲ್ಲಿ ಹೊರಗಿನವರಾರಾದರೂ ಬರಬೇಕು. ಮನೆಯಲ್ಲಿಲ್ಲವೆಂದು ಹೊರಟುಹೋದರೆ ಮೇಲು. ಇಲ್ಲವಾದರೆ ಅವರಿಗೂ ಉಳಿಗಾಲವಿಲ್ಲ. ರಾಮಭಜನೆ ಸಂಘದ ಆ ಕಪಿ ಮನುಷ್ಯ ಬಂದರಂತೂ ಕೊಂದೇಬಿಡುವಷ್ಟು ಕೋಪ. ಇಲ್ಲಿಯವರಿಗೆ ಕೊಟ್ಟಿರುವ ಚಂದಾ ಹಣ ಕಕ್ಕಿಸಲೇ ಎಂಬಂತೆ. ಅವನೂ ಪಾಪ! ಬುದ್ಧಿವಂತ. ಸಂದರ್ಭ ಅರಿತು 'ಮತ್ತೆ ಬರ್ತೀನಿ' ಎಂದು ಓಡೇ ಬಿಡುತ್ತಾನೆ. 'ಎಂದೂ ಬರಬೇಡಿ' ಎಂದು ನಾ ಹೇಳಲಿಕ್ಕೆ ಮುಂಚೇನೇ!

ಈ ವಿಚಾರಗಳಲ್ಲೇ ಯೋಚನಾತರಂಗ ಹಾರಿಸುತ್ತಾ "ಒಂದು ಎಮ್ಮೆ ಕಟ್ಟಿಕೊಳ್ಳಬಾರದೇ?" ಎನ್ನಿಸುತ್ತೆ. ಮನೆಯ ತುಂಬಾ ಮಕ್ಕಳಿದ್ದಾರೆ—ಅದರ ಆರೈಕೆಗೆ. S.S.L.C. ಕ್ಲಾಸನ್ನೇ ಮೂರು ವರ್ಷ ಕಂಡ ನನ್ನ ಮುದ್ದು ಮಗ ಮುರಾರಿ ಅದನ್ನು ಕಾಯಲು ತಯಾರು. ಮೇಯಲಿಕ್ಕೆ ಮಲ್ಲೇಶ್ವರದ ಬೀದಿಗಳಿವೆ. ಹಾಲು ಕರೆಯಲಿಕ್ಕೆ ರಾಧೆ. ಕುಡಿಯಲಿಕ್ಕೆ ನಾನಿದ್ದೇ ಇರುವೆನಲ್ಲಾ! ಮತ್ತೇನು?

* * *

ಊಟ ಮಾಡದೆ ಆಫೀಸಿಗೆ ಹೋಗುತ್ತಿದ್ದೇನೆ. ಈ ಹೊತ್ತು ಆಫೀಸಿನಲ್ಲಿ ಜಗಳ ಖಂಡಿತ. ಸಾಹೇಬರ ಮೇಲೆ ನಾನೋ, ನನ್ನ ಮೇಲೆ ಸಾಹೇಬರೋ. ಪಾಪ! ಅದರ ಪರಿಸ್ಥಿತಿ ಹೇಗೋ. ಅವರೂ ಕಾಫಿ ಕುಡಿದರೋ ಇಲ್ಲವೋ. ಅವರ ಮನೆ ದೋಸೇನೂ ತೂತೇ ಅಲ್ಲವೇ?

—ಶರತ್:

ನನ್ನ ಸಂಪಾದಕೀಯ ಅನುಭವ

ಪತ್ರಿಕೆ ನಡೆಸುವುದು ಬಹಳ ಸುಲಭ ಎಂದು ಕೆಲವರ—ಏಕೆ, ಅನೇಕರ ಭಾವನೆ. ಸಂಪಾದಕರು ಸಹಿಸಬೇಕಾದ ಕಷ್ಟನಿಷ್ಠುರಗಳು ಇತರರಿಗೆ ಹೇಗೆ ಗೊತ್ತಾಗಬೇಕು? ಕೆಲಸಮಾಡಿ, ಸಿಕ್ಕಿದವರಿಂದೆಲ್ಲಾ ಹಿಯ್ಯಾಳಿಸಿಕೊಳ್ಳಬೇಕು. ಇತರರ ಏಳಿಗೆ, ಜ್ಞಾನ, ಸಂತೋಷ ಇವುಗಳಿಗಾಗಿ ದುಡಿದು, ತಮ್ಮಲ್ಲಿದ್ದ ಹಣ ವನ್ನೆಲ್ಲಾ ಖರ್ಚುಮಾಡಿಕೊಳ್ಳುವುದೂ ಅಲ್ಲದೆ, ಚಿಲ್ಲರೆ ಬರಹಗಾರರಿಂದೆಲ್ಲಾ ಅನ್ನಿಸಿಕೊಳ್ಳಬೇಕು!—ಈ ಸಂಪಾದಕೀಯ ಕೆಲಸ ಕೇವಲ ಕೈ ತೋರಿಸಿ ಅವ ಲಕ್ಷಣ ಎಂದು ಹೇಳಿಸಿಕೊಂಡಹಾಗೆ. ಅದೂ, ಈಗಿನ ಕಾಲದಲ್ಲೋ, ಎರಡು ಪದ ಜೋಡಿಸುವುದಕ್ಕೆ ಬಂತು ಅಂದರೆ ಸಾಕು, ಹೊರಟ ತಾನೂ ಒಬ್ಬ ಬರಹ ಗಾರ, ಲೇಖಕ, ಕವಿ, ಗ್ರಂಥಕರ್ತ ಎಂದು ಹೇಳಿಕೊಂಡು, ಕಂಡ ಕಂಡ ದಿನಪತ್ರಿಕೆ ವಾರಪತ್ರಿಕೆ, ಮಾಸಪತ್ರಿಕೆ ಇತ್ಯಾದಿಗಳಿಗೆ ತನ್ನ ಉದ್ಗಾರಗಳನ್ನು ಕಳುಹಿಸಿದ್ದೂ ಕಳುಹಿಸಿದ್ದೆ—"ತರುಣ ಸಾಹಿತಿಗಳ ಸಂಘ, ಕಿರಿಯ ಲೇಖಕರ ತಂಡ, ನವೀನ ಬರಹಗಾರರ ಗುಂಪು" ಇವುಗಳಿಗೆ ಉಮೇದುವಾರಿಕೆ ಹಾಕಿದ್ದೂ ಹಾಕಿದ್ದೇ!

ಇಷ್ಟೆಲ್ಲಾ ಯಾಕೆ ಹೇಳ ಬಂದೆ ಅಂದರೆ, ನೋಡಿ, ನಾನೊಂದು ಮಾಸ ಪತ್ರಿಕೆ ನಡೆಸುತ್ತಿದ್ದೆ. ಅದರ ಹೆಸರು ಈಗ ಬೇಡ ಅನ್ನಿ—ಅದು ನಿಂತುಹೋಗಿ ಅನೇಕ ದಿನಗಳಾದವು. ಅದನ್ನು ಪ್ರಕಟಿಸಿ ಕನ್ನಡ ಭಾಷೋದ್ಧಾರ ಮಾಡ ಬೇಕೆಂದು ನಾನು ಪಟ್ಟ ಕಷ್ಟ ಅಷ್ಟಿಷ್ಟೆಂದು ಹೇಳತೀರದು—ದೇವರಿಗೇ ಗೊತ್ತು. ನಮ್ಮ ವೈದ್ಯರು ನನಗೆ ಈ ವಯಸ್ಸಿನಲ್ಲಿಯೇ ಬಟ್ಟ ತಲೆ ಬಿದ್ದಿರುವುದು ಖಂಡಿತ ವಾಗಿಯೂ ಆ ಕಾರಣದಿಂದಲೇ ಎಂದು ಈವತ್ತಿಗೂ ಸಾಧಿಸುತ್ತಿದ್ದಾರೆ. "ಎಲ್ಲಿ ಯಾದರೂ ಉಂಟೆ, ಪಿತ್ಥಪ್ರಕೃತಿಯಿರಬಹುದು" ಎಂದು ನೀವು ಹೇಳಬಹುದು. ಆದರೆ, ನೀವೇ ನೋಡಿ; ಒಂದು ಉದಾಹರಣೆ ಕೊಡುತ್ತೇನೆ. ನನ್ನ ಸಂಪಾದ ಕೀಯ ದಿನಗಳಲ್ಲಿ ನನಗೂ ಒಬ್ಬ 'ಲೇಖಕ'ನಿಗೂ ನಡೆದ ಪತ್ರವ್ಯವಹಾರವಿದು.

ಹ. ಕಾಳೂರು.

ಶನಿವಾರ

"........ ..." ಪತ್ರಿಕೆಯ ಮಾನ್ಯ ಸಂಪಾದಕರಲ್ಲಿ ತರುಣ ಸಾಹಿತಿ, ಆಧುನಿಕ ಕವಿಶ್ರೇಷ್ಠ "........ ..."ಯ್ಯನು ಮಾಡುವ ಅನೇಕ ನಮಸ್ಕಾರಗಳು.

ಸ್ವಾಮಿ, ನಾವು ಲೇಖಕರು ಎಷ್ಟೋ ಕಷ್ಟಪಟ್ಟು ಬರೆದ ನಮ್ಮ ಅಮೂಲ್ಯ ಬರವಣಿಗೆಗಳನ್ನು ಪತ್ರಿಕೆಗಳಿಗೆ ನಮ್ಮ ಸ್ವಂತ ಖರ್ಚಿನಲ್ಲಿಯೇ ಕಳುಹಿಸುತ್ತೇವೆ. ಅವುಗಳನ್ನು ಸರಿಯಾಗಿ ತಪ್ಪು ನೆಪ್ಪುಗಳಿಲ್ಲದೆ ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸುವುದು ಸಂಪಾದಕರ ಕರ್ತವ್ಯ. ಹಾಗೆ ಮಾಡದೆ ಅವುಗಳಲ್ಲಿ ಮನಸ್ಸು ಬಂದಹಾಗೆಲ್ಲಾ

ಬದಲಾವಣೆಗಳನ್ನು ಮಾಡುವುದು ಯಾವ ನ್ಯಾಯ? ನಾವು ಎಷ್ಟೋ ತಲೆ ಕೆರೆದು ಕೊಂಡು, ಯೋಚನೆ ಮಾಡಿ, ನಿಘಂಟುಗಳನ್ನು ತಿರಿವಿ, ಲೇಖನಗಳನ್ನು ಬರೆಯುತ್ತೇವೆ. ನೀವೋ "ಲೇಖಕನಿಗೊಂದು ವರುಷ, ಸಂಪಾದಕನಿಗೊಂದು ನಿಮಿಷ!" ಎಂಬಂತೆ ಒಂದು ಕ್ಷಣದಲ್ಲಿ ಬದಲಾವಣೆಗಳನ್ನು ಮಾಡಿ ಕೆಡಿಸಿಬಿಡುತ್ತೀರಿ. ನಮ್ಮ ಮಿದುಳಿನ ಶ್ರಮಕ್ಕೆ ಏನು ಫಲವಾಯಿತು? ಈಗ ನೋಡಿ, ನಾನು ತಮ್ಮ ಹೋದ ಸಂಚಿಕೆಗೆ ಕಳುಹಿಸಿದ ಲೇಖನದಲ್ಲಿ "ನಳಪ್ಪ" ಎಂದಿದ್ದುದನ್ನು "ಖಳಪ್ಪ" ಎಂದು ಬದಲಾಯಿಸಿದ್ದೀರಿ. ನಳನನ್ನು ಖಳನನ್ನಾಗಿ ಮಾಡುವುದು ಯಾವ ನ್ಯಾಯ? ಧರ್ಮಾತ್ಮನಾದ 'ನಳ'ನೆಲ್ಲಿ, ನೀಚಾತ್ಮನಾದ 'ಖಳ'ನೆಲ್ಲಿ? ಇದರಿಂದ ನನ್ನ ಅರ್ಥವೇ ಕೆಟ್ಟುಹೋಗಲಿಲ್ಲವೇ? ಮತ್ತು, "ಕೂಡುತ್ತಿದ್ದನು" ಎಂಬುದನ್ನು "ಕೊಡುತ್ತಿದ್ದನು" ಎಂದು ಮುದ್ರಿಸಿರುವಿರಿ. ಹಣವನ್ನು "ಕೂಡು"ವುದಕ್ಕೂ, "ಕೊಡು"ವುದಕ್ಕೂ ಭೇದವಿಲ್ಲವೇ? ಒಂದಕ್ಕೊಂದು ಪರಸ್ಪರ ವಿರುದ್ಧವಾಯಿತಲ್ಲ! ಅದರಿಂದ ಲೇಖನದ ಭಾವವೇ ವಿಪರೀತವಾಗಿ ಹೋಗಲಿಲ್ಲವೆ? ಇದಕ್ಕೆ ತಾವು ಏನು ಸಮಾಧಾನಕೊಡುವಿರಿ? ಖಂಡಿತ ಉತ್ತರ ಬರೆಯುವುದು,

ಇತಿ ತಮ್ಮ ವಿಶ್ವಾಸಿ,
ತರುಣ ಸಾಹಿತಿ "............''ಯ್ಯ.

ವಿ. ಸೂ:—ಉತ್ತರಕ್ಕಾಗಿ ಸ್ಟಾಂಪು ಹಚ್ಚಿರುವ ಲಕ್ಕೋಟೆಯೊಂದನ್ನು ಇದರೊಂದಿಗೆ ಕಳುಹಿಸಿದ್ದೇನೆ.

ತ. ಸಾ.

ಈ ಪತ್ರಕ್ಕೆ ನಾನು ಹೀಗೆ ಜವಾಬು ಬರೆದೆ:—

ಬೆಂಗಳೂರು
ಸೋಮವಾರ.

ಮಾನ್ಯಲೇಖಕರಾದ ತರುಣ ಸಾಹಿತಿ ಆಧುನಿಕ ಕವಿಶ್ರೇಷ್ಠ ಮ|| ರಾ|| ಶ್ರೀ "............''ಯ್ಯನವರಿಗೆ ಅನೇಕ ನಮಸ್ಕಾರಗಳು.

ತಮ್ಮ ಪತ್ರ ತಲಪಿ ಅಭಿಪ್ರಾಯವಾಯಿತು. ಇಂತಹ ಪತ್ರಗಳಿಗೆ ನಾವು ಸಂಪಾದಕರು ಉತ್ತರ ಕೊಡುವ ಅಭ್ಯಾಸವಿಟ್ಟಿಲ್ಲ. ಆದರೂ ತಾವು ಅಂಚೆಯ ವೆಚ್ಚ ಕಳುಹಿಸಿರುವುದರಿಂದ ಇದನ್ನು ಬರೆದಿದ್ದೇವೆ. ಲೇಖಕರ ಬರಹಗಳನ್ನೂ ಸೂಕ್ತವಾಗಿ ಕಂಡು ಬಂದಂತೆ ತಿದ್ದಲು ಸಂಪಾದಕರಿಗೆ ಹಕ್ಕು ಇದ್ದೇ ಇದೆ. ತಮ್ಮ ಲೇಖನದಲ್ಲಿ "ನಳಪ್ಪ" ಎಂಬ ಹೆಸರು ಯಾವ ವ್ಯಕ್ತಿಗಾದರೂ ಅನ್ವಯಿಸಬಹುದೆಂಬ ಶಂಕೆಯಿಂದ "ಖಳಪ್ಪ" ಎಂದು ಮಾರ್ಪಡಿಸಿದ್ದೇವೆ—"ಖಳಪ್ಪ" ಎಂಬ ಹೆಸರನ್ನು ಯಾರೂ ತನ್ನದೆಂದು ಮುಂದೆ ಬಂದು ಹೇಳಿಕೊಳ್ಳುವ ಹಾಗಿಲ್ಲ! ನಿಮ್ಮ ಲೇಖನದ ನಾಯಕನಿಗೆ ಯಾವ ಹೆಸರಾದರೇನು? ಯಾವ ಹೆಸರಿನಿಂದ ಕರೆದರೂ ಈರುಳ್ಳಿಯ ಸುವಾಸನೆಯು ಈರುಳ್ಳಿಯದೇ ಅಲ್ಲವೆ! ಮತ್ತು "ಕೂಡು"

ವುದಕ್ಕೂ "ಕೊಡು"ವುದಕ್ಕೂ ಇರುವ ಮಹಾ ವ್ಯತ್ಯಾಸವೇನು? ಕಾಗುಣಿತ ರೀತ್ಯಾ ಒಂದು 'ಎ'ತ್ವ ತಾನೆ? ಮುದ್ರಿಸುವುದರಲ್ಲಿ ಒಂದೊಂದು ವೇಳೆ ಹೀಗೆ ವ್ಯತ್ಯಾಸವಾಗುವುದುಂಟು. ಅದರಿಂದಾದ ಪ್ರಮಾದವೇನು? ನೀವು ಬರೆದುದಕ್ಕಿಂತ ಒಂದು 'ಎ'ತ್ವ ಜಾಸ್ತಿಯಿದ್ದರೆ ನಿಮಗೇ ಲಾಭವಲ್ಲವೇ? ಅಲ್ಲದೆ ಕೂಡಿಡುವುದಕ್ಕಿಂತ ಕೊಡುವುದೇ ಶ್ರೇಷ್ಠವೆಂಬುದು ನಮ್ಮ ಧೃಡವಾದ ಮತ. ಆದುದರಿಂದ ತಮ್ಮ ಪತ್ರವು ಅನವಶ್ಯಕವೆಂದು ಹೇಳಬಹುದಲ್ಲವೆ?

ಇತಿ ತಮ್ಮ ವಿಶ್ವಾಸಿ,
"............"ಯ ಸಂಪಾದಕ.

ವಿ.ಸೂ.—ಇನ್ನು ಮೇಲೆ ನಿಮ್ಮ ಪತ್ರಗಳಿಗೆ ಉತ್ತರಬೇಕಾದರೆ, ಒಂದು ಹಾಳೆ ಖಾಲಿ ಕಾಗದವನ್ನೂ ಕಳುಹಿಸುವುದು.

ಸಂಪಾದಕ.

ಈ ಪತ್ರಕ್ಕೆ ತರುಣಸಾಹಿತಿ ಕವಿಶ್ರೇಷ್ಠ ಇತ್ಯಾದಿ ಬಿರುದಾಂಕಿತರು ಈ ರೀತಿ ಉತ್ತರ ಬರೆದರು:—

ಹ. ಕಾಳೂರು
ಬುಧವಾರ

"............" ಯ ಸಂಪಾದಕರಿಗೆ ವಂದನೆಗಳು.

ತಮ್ಮ ಪತ್ರವು ಸೇರಿತು. ತಮ್ಮ ಅಭಿಪ್ರಾಯಗಳಿಗೆ ಏನು ಹೇಳಬೇಕೊ ತಿಳಿಯದಾಗಿದೆ! ನಳನಾದರೇನು, ಖಳನಾದರೇನು, ಹಾಳೆ ತುಂಬಿಸಿದ್ದೆಲ್ಲಾ ಒಂದು ಎಂಬುದಾಗಿ ತಾವು ತಿಳಿದಿರುವಂತೆ ಕಾಣುತ್ತೆ. ನಮಗೆ, ಸಾಹಿತಿಗಳಿಗೆ, ಇದು ಸ್ವಲ್ಪವೂ ಸರಿಬೀಳುವುದಿಲ್ಲ. ಕನ್ನಡಮ್ಮನ ಸೇವೆಗಾಗಿ ನಾವು ಎಷ್ಟೋ ದುಡಿಯುತ್ತಿದ್ದೇವೆ. ನಮ್ಮ ಈ ಅಳಿಲು ಸೇವೆಯು ತಮ್ಮ ಸಂಪಾದಕತ್ವದಿಂದ ಬೂದಿಯಲ್ಲಿ ಮಾಡಿದ ಹೋಮದಂತಾಗಿದೆ. ಯಾವುದಾದರೂ ವ್ಯಕ್ತಿಯ ಹೆಸರು ಬರಬಹುದೆಂಬ ಹೆದರಿಕೆಯಿದ್ದರೆ, ಅನೇಕ ಆಂಗ್ಲ ಪತ್ರಿಕೆಗಳಲ್ಲಿ ಮಾಡುವಂತೆ "ಈ ಪತ್ರಿಕೆಯಲ್ಲಿ ಬರುವ ಹೆಸರುಗಳೂ, ಸನ್ನಿವೇಶಗಳೂ ಕಲ್ಪನಾ ಪ್ರಪಂಚಕ್ಕೆ ಸೇರಿದವೇ ಹೊರತು ಯಾವ ವ್ಯಕ್ತಿಗೂ ಅನ್ವಯಿಸುವುದಿಲ್ಲ" ಎಂದು ಮೊದಲನೇ ಪುಟದಲ್ಲಿಯೇ ಏಕೆ ಪ್ರಕಟಿಸಬಾರದು? ಇಷ್ಟು ತೋರದಿದ್ದವರು ಪತ್ರಿಕಾ ಸಂಪಾದಕತ್ವಕ್ಕೇಕೆ ಕೈ ಹಾಕಬೇಕೊ ನಾನು ಕಾಣೆ. ಒಂದು 'ಎ'ತ್ವದಿಂದಾದ ಪ್ರಮಾದವೇನೆಂದು ಹೇಳುವಿರಲ್ಲಾ, ಇದಕ್ಕೆ ನಾನೇನು ಹೇಳಲಿ? ಪಾಣಿನಿಯು ಒಂದಕ್ಷರ ಕಡಿಮೆಯಾದರೆ ಒಂದು ಪುತ್ರೋತ್ಸವವಾದಹಾಗೆಂದು ಎಣಿಸಿದ್ದನಂತೆ—ಒಂದು 'ಎ'ತ್ವ ಉಳಿದರೆ ನಮಗೂ ಹಾಗೆಯೇ! ಅಲ್ಲದೆ, ಮುದ್ರಣದ ತಪ್ಪುಗಳನ್ನೆಲ್ಲಾ ತಿದ್ದಬೇಕಾದುದು ಸಂಪಾದಕರ ಕರ್ತವ್ಯವಲ್ಲವೆ? ನಮ್ಮ ಅಮೂಲ್ಯ ಲೇಖನಗಳಿಗೆ

ತಾವು ಹಣವನ್ನೇನೂ ಕೊಡುವುದಿಲ್ಲವೆಂಬುದು ಲೋಕ ಪ್ರಸಿದ್ಧಿಯಾಗಿದೆ. ನಾವು ಬರೆದು ಕಳುಹಿಸಿದ್ದುದನ್ನು ತಪ್ಪು ಮಾರ್ಪಾಟುಗಳಿಲ್ಲದೆ ಪ್ರಕಟಿಸುವಷ್ಟಾದರೂ ಮಾಡುವುದು ನ್ಯಾಯವಲ್ಲವೆ?

ಇತಿ ತಮ್ಮ ವಿಶ್ವಾಸಿ,

ತರುಣ ಸಾಹಿತಿ........ಇತ್ಯಾದಿ "..........."

ವಿ.ಸೂ.—ನೀವು ಕೇಳಿದಂತೆಯೇ ಖಾಲಿ ಕಾಗದವನ್ನು ಕಳುಹಿಸಿದ್ದೇನೆ.

ತ. ಸಾಹಿತಿ.

ಈ ಪತ್ರವನ್ನು ನೋಡಿ ನನಗೆ ಬಹಳ ಕೋಪ ಬಂತು. ಈ ರೀತಿ ಉತ್ತರ ಬರೆದೆ:

ಬೆಂಗಳೂರು

ಶುಕ್ರವಾರ

ಬರಹಗಾರ ಮ|| ರಾ|| ಶ್ರೀ "..........."ಯ್ಯನವರಿಗೆ ವಂದನೆಗಳು.

ತಮ್ಮ ಪತ್ರವು ತುಂಬಾ ಅಸಹ್ಯಕರವಾಗಿ ಕಂಡುಬರುತ್ತೆ. ನಮ್ಮ ಪತ್ರಿಕೆಯ ಹಾಳೆಗಳನ್ನು ತುಂಬಿಸಿ ಅಚ್ಚು ಹಾಕಿಸಿ ಮಾಸ ಮಾಸವೂ ಮೊದಲನೆಯ ತಾರೀಖಿಗೆ ಸರಿಯಾಗಿ ಹೊರಬೀಳಿಸಬೇಕಾದರೆ ನಮ್ಮ ಕಷ್ಟವು ಎಷ್ಟೆಂಬುದನ್ನು ನೀವೇನು ಬಲ್ಲಿರಿ? ಅಲ್ಲದೆ, ನಿಮ್ಮಂಥವರ ಲೇಖನಗಳು ಬರೀ ಹಾಳೆಗಳನ್ನು ತುಂಬುವುದಲ್ಲದೆ ಸಾಹಿತ್ಯವೆಂದೇನಾದರೂ ತಿಳಿದಿದ್ದೀರಾ? ತಮ್ಮ ಲೇಖನಗಳಿಗೆ ಹಣವನ್ನೇನೂ ಕೊಡುವುದಿಲ್ಲವೆಂದು ಹೇಳುತ್ತೀರಿ. ನಿಮ್ಮ ಹೆಸರನ್ನು ಮುದ್ರಣದಲ್ಲಿ ಕಾಣುವುದೇ ಮೀರಿದ ಪ್ರತಿಫಲವೆಂದು ತಿಳಿದುಕೊಳ್ಳಬೇಕೆಂದು ನಮಗೆ ತೋರುತ್ತದೆ! ನಮಗೆ ಬರುವ ಕೆಲವು ಲೇಖನಗಳನ್ನು ನಾವು ಓದಬೇಕಾದುದಕ್ಕೆ ನಮಗೇ ಆ ಲೇಖಕರು ಪರಿಹಾರ ಕೊಡಬೇಕಾದುದು ನ್ಯಾಯವೆಂದು ಖಂಡಿತವಾಗಿ ಹೇಳಬಲ್ಲೆವು! ಈ ಪತ್ರಿಕೆ ಹೊರಡಿಸುವುದು, ತಮ್ಮಂಥವರಿಗೆ ಉತ್ತರ ಪ್ರತ್ಯುತ್ತರಗಳನ್ನು ಬರೆಯುವುದು ಇದೇ ನಮ್ಮ ಕೆಲಸವೆಂದು ತಿಳಿದುಕೊಂಡಿದ್ದೀರಾ? ಇನ್ನು ಈ ವ್ಯವಹಾರವನ್ನು ಇಲ್ಲಿಗೆ ಮುಗಿಸಬೇಕೆಂದು ಪ್ರಾರ್ಥಿಸುವ,

"..........."ಯ ಸಂಪಾದಕ.

ಆದರೆ ಅಷ್ಟಕ್ಕೇ ನಮ್ಮ "ತರುಣ ಸಾಹಿತಿ"ಗಳು ಬಿಡಬೇಕಲ್ಲಾ! ಮತ್ತೆ ಬರೆದರು—

ಹ. ಕಾಳೂರು

ಭಾನುವಾರ

"..........."ಯ ಸಂಪಾದಕರಿಗೆ,

ಪ್ರತ್ರಿಕೆಯನ್ನು ಹೊರಡಿಸುವ ನಿಮಗೆ ಉತ್ತರ ಪ್ರತ್ಯುತ್ತರಗಳನ್ನು ಬರೆಯಲಾಗದಿದ್ದರೆ, ಈ ಉದ್ಯಮಕ್ಕೇಕೆ ಬಂದಿರಿ? ನಿಮಗೆ ಸಹಜವಾದ ಕೆಲಸವಾವುದೋ

ಅದರಲ್ಲಿಯೇ ನಿರತರಾಗಿರುವುದು ಒಳ್ಳೆಯದಲ್ಲವೆ? "ಐವಾರು ಜೇಸಿನದಿ ಕೋತಿ ಪಿಲ್ಲಾಯ" ಎಂದು ಕೇಳಿರಬಹುದು. ಸಾಹಿತ್ಯದ ಗಂಧವನ್ನೇ ಅರಿಯದ ನೀವು ನಮ್ಮ ಲೇಖನಗಳ ಬೆಲೆಯನ್ನೇನು ಕಂಡುಹಿಡಿಯಬಲ್ಲಿರಿ? ಲೇಖನಗಳನ್ನು ಓದುವುದಕ್ಕೆ ಪರಿಹಾರಬೇಕೆನ್ನುವಿರಿ—ನಿಮಗೆ ನಾವು ಉಚಿತವಾಗಿ ಲೇಖನಗಳನ್ನು ಕಳುಹಿಸುವುದೂ ಅಲ್ಲದೆ ನಿಮ್ಮ ಪತ್ರಿಕೆಯನ್ನೂ ಸಹ ದುಡ್ಡು ಕೊಟ್ಟು ನಾವು ಕೊಳ್ಳುವುದು ಸಾಲದೆ? (ಬರಹಗಾರರಿಗೂ ಕೂಡ ಒಂದು ಉಚಿತ ಪ್ರತಿಯನ್ನು ಕಳುಹಿಸದ ಜಿಪುಣತ್ವ ತಮ್ಮದು!) ನಮ್ಮ ಹೆಸರನ್ನು ಅಚ್ಚಿನಲ್ಲಿ ನೋಡುವುದೇ ನಮ್ಮ ಗುರಿಯಾದ ಪಕ್ಷಕ್ಕೆ, ರಾಜಕೀಯಕ್ಕಿಳಿದು ಈಗಿನ ಉಪವಾಸದಿಂದಲೇ ಲಕ್ಷಾಂತರ ಪ್ರಚಾರವಿರುವ ದೈನಂದಿನ ಪತ್ರಿಕೆಗಳಲ್ಲಿ ಪ್ರಸಿದ್ಧಿ ಹೊಂದುತ್ತಿದ್ದೆವು. ಆದರೆ ಭಾಷಾಮಾತೆಯ ಸೇವೆಗಾಗಿ ಕಂಕಣ ತೊಟ್ಟಿರುವುದರಿಂದ ನಿಮ್ಮ ಕೈಯಲ್ಲಿ ಸಿಕ್ಕಬೇಕಾಯಿತು ಇನ್ನುಮೇಲಾದರೂ ನಿಮ್ಮ ತಪ್ಪು ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕೆಂದು ದೈನ್ಯತೆಯಿಂದ ಪ್ರಾರ್ಥಿಸಿಕೊಳ್ಳುವ,

ತರುಣ ಸಾಹಿತಿ........ಇತ್ಯಾದಿ "..........."ಯ್ಯ.

ವಿ. ಸೂ.—ಕಾಗದ ಲಕ್ಕೋಟೆ ಎರಡನ್ನೂ ಮರೆಯದೆ ಕಳುಹಿಸಿದ್ದೇನೆ.

ಕ. ಸಾಹಿತ್ಯ.

ಇದಕ್ಕೆ ಉತ್ತರ ಕೊಡಬೇಕೆ, ಏನು ಮತ್ತು ಹೇಗೆ ಉತ್ತರ ಕೊಡಬೇಕೆಂಬುದನ್ನು ಒಂದು ದಿನವೆಲ್ಲಾ ಯೋಚಿಸಿದೆ. ಯಾವುದೂ ಸರಿಬರಲಿಲ್ಲ. ಅಷ್ಟರಲ್ಲಿ ನನ್ನ ಸಲಹೆಗಾರರೊಬ್ಬರು ಬಂದರು. ಅವರಿಗೆ ಇದನ್ನೆಲ್ಲಾ ವಿಶದವಾಗಿ ಹೇಳಿದೆ. ಅವರು "ಉತ್ತರವೇಕೆ ಬರೆಯಬೇಕು! ಕಾಗದವನ್ನು ಇನ್ನು ಯಾವುದಕ್ಕಾದರೂ ಉಪಯೋಗಿಸು. ಸ್ಟಾಂಪು ಹಚ್ಚಿದ ಲಕ್ಕೋಟೆಯೇ ನಮಗೆ ಲಾಭ. ಅವನು ಬರೆದಿರುವ ವಿಳಾಸವನ್ನು ಹೊಡೆದು ಹಾಕಿದರಾಯಿತು" ಎಂದರು. ನನಗೇನೋ ಇದು ಸಮ್ಮತಿಯಾಗಲಿಲ್ಲ. "ಅವನು ಶುದ್ಧ ಕೀಳು ಮನುಷ್ಯನಾಗಿ ಕಾಣುತ್ತಾನೆ. ನಾನು ಕಳುಹಿಸಿದ ಕಾಗದ ಲಕ್ಕೋಟೆಗಳನ್ನಿಟ್ಟುಕೊಂಡು ಹೀಗೂ ದುಡ್ಡು ಮಾಡುತ್ತೀರಾ ಎಂದರೇನು ಮಾಡುವುದು" ಎಂದೆ. ಅವರು ಅದಕ್ಕೆ "ಇನ್ನೊಂದು ಮಾಡೋಣ. ಅವನ ಸ್ಟಾಂಪಿನ ಲಕ್ಕೋಟೆಯನ್ನೂ, ಕಾಗದವನ್ನೂ ಮತ್ತೆ ಅವನಿಗೇ ನಟ್ಪೈಡು ಮಾಡೋಣ. ತಕ್ಕ ಶಿಕ್ಷೆಯಾಗುತ್ತೆ" ಅಂದರು ನನಗೆ ಅದೂ ಸರಿಹೋಗಲಿಲ್ಲ. ಕೊನೆಗೆ ಅವರು ಯೋಚಿಸಿ ಕೈ ಚಪ್ಪಳಿ ಹೊಡೆದು "ಕೊಡು, ನನ್ನ ಕೈಗೆ ಕಾಗದ. ನಾನು ಬರೆಯುತ್ತೇನೆ" ಎಂದು ಇಸ್ಕೊಂಡು ಏನನ್ನೋ ಬರೆದರು. ಕಾಗದವು ಬರೀ ಸಮ್ಸ್ಕೃತಗಳಿಂದ ತುಂಬಿ ಹೀಗಿತ್ತು :—

ಬೆಂಗಳೂರು

ಬುಧವಾರ

ಕ. ಸಾ. ? ಇತ್ಯಾದಿ "...........ಯ್ಯನಿಗೆ."

........?....... !....... !!.......? !

........!!.... .. !....... !!!

.......!........!!

............!!! ಜೋಕೆ !!!

"..........''ಯ ಸಂ. ಸ ......ರ.

—ಇದಕ್ಕೆ ಉತ್ತರವೇನೂ ಬರಲಿಲ್ಲ !

ಬೆಂಗಳೂರು

20-4-1943

" ಕೊರವಂಜಿ " ಸಂಪಾದಕರಲ್ಲಿ ವಿಜ್ಞಾಪನೆಗಳು.

ನನ್ನ ಪತ್ರಿಕಾ ಸಂಪಾದಕತ್ವದ ಅನುಭವವೊಂದನ್ನು ಬರೆದಿದ್ದೇನೆ. ತಾವು ತಮ್ಮ "ಕೊರವಂಜಿ'' ನಡೆಸುವುದರಲ್ಲಿ ಇಂತಹ ಪ್ರಸಂಗಗಳು ಒದಗಬಹುದು. ಇಷ್ಟವಿದ್ದಲ್ಲಿ ನಮ್ಮ ಸಲಹೆಗಾರರನ್ನು ತಮಗೂ ಪರಿಚಯ ಮಾಡಿಸಿಕೊಡುತ್ತೇನೆ.

ತಮ್ಮ ವಿಶ್ವಾಸಿ,

ಬೀರಣ್ಣ.

[ದಯವಿಟ್ಟು ಮಾಡಿಸಿಕೊಡಯ್ಯಾ.—ಸಂ.]

—— o ——



" ಈ ಕಾಲದಲ್ಲಿ ಯಾರೂ ಏನನ್ನೂ ಬಾಯಿಬಿಟ್ಟು ಹೇಳುವುದಕ್ಕೇ ಆಗದೆ ಹೋಗಿದೆ ಸ್ವಾಮಿ "

ನಾ ತಿ ಪಿ

ಮುಂದಿನ ಸಾಲಿನ ಮಧ್ಯದಲ್ಲಿ ದಿಂಬಿನ ಸೀಟಿನಲ್ಲಿ ಕುಳಿತಿದ್ದ ರಾವ್ ಬಹದ್ದೂರ್‌ರವರು ತಮ್ಮ ವಿಸಿಟಿಂಗ್ ಕಾರ್ಡಿನ ಹಿಂಭಾಗದಲ್ಲಿ ಏನನ್ನೋ ಬರೆದರು. ಮೂರೇ ಮೂರು ಮಾತು. ೩-೩-೨ ಒಟ್ಟು ಎಂಟಕ್ಷರ. ಅವರ ಹಿಂಭಾಗದಲ್ಲೇ ಅವರ ಕಿಂಕರನಾಗಿ ವರ್ತಿಸಲು ತಯಾರಾಗಿ ಕುಳಿತಿದ್ದ ಕಾರ್ಯದರ್ಶಿಯ ಕೈಗೆ ಅದನ್ನು ಕೊಟ್ಟರು. ಆತ ತಲೆಬಗ್ಗಿಸಿ ಕೈನೀಡಿ ವೇದಿಕೆಯ ಎಡಮಗ್ಗುಲಲ್ಲಿದ್ದ ಹಂತವನ್ನು ಸದ್ದುಮಾಡದೆ ಹತ್ತಿದ. ಪುರಭವನದಲ್ಲಿ ಕಿಕ್ಕಿರಿದಿದ್ದ ಮಹಾಶಯರೆಲ್ಲರೂ ಇನ್ನೂ ಕೈಚಪ್ಪಾಳೆ ತಟ್ಟುತ್ತಿದ್ದರು. ಭಾಗವತರ ಕಂಠ, ಅವರ ಥಾಟಿ, ಅವರ ಠೀವಿ, ಅವರ ಠೇಂಕಾರ, ಅವರ ಏರಿಳಿತ, ಅವರ ಆಲಾಪನಾ ವೈಖರಿ, ಅವರ ಸಂಗೀತ ಶಾಸ್ತ್ರ ಕೋವಿದತ್ವ ಇತ್ಯಾದಿಗಳೆಲ್ಲವೂ ಚಪ್ಪಾಳೆಯ ಮಾರುಲಿಯಿಂದಲೇ, ಒಳಗೆ ಬರಲಾಗದೆ ವರಾಂಡಾದಲ್ಲಿ ನಿಂತಿದ್ದ ಪಾಪಿಗಳ ಕಿವಿಗೂ ಭಾಸವಾಯಿತು. ಅವರೂ ಅಲ್ಲಿಂದ ಕರತಾಡನ ಮಾಡಿ ಹರ್ಷಧ್ವನಿಯನ್ನು ಇಮ್ಮಡಿಸಿದರು

ಗಂಡಸರೆಲ್ಲರೂ ಸಾಮಾನ್ಯವಾಗಿ ಬಲಗೈಯನ್ನು ಬಲವಾಗಿ ಎಡಗೈಯ ಮೇಲೆ ಬಡಿದು ಚಪ್ಪಾಳೆ ತಟ್ಟುತ್ತಾರೆ. ಆದರೆ ವಾಮಾಕ್ಷಿ, ವಾಮಭಾಗಿ ಮುಂತಾದ ಬಿರುದುಳ್ಳ ಮಹಿಳಾ ವೃಂದವು ಸಾಮಾನ್ಯವಾಗಿ ಬಲಗೈಯನ್ನು ಬಿಚ್ಚಿಹಿಡಿದು ಎಡಗೈಯನ್ನೆತ್ತಿ ಅದರ ಮೇಲೆ ಬಡಿದು ಚಪ್ಪಾಳೆ ತಟ್ಟುತ್ತಾರೆ. ಈ ವ್ಯತ್ಯಾಸವನ್ನು ವಾಚಕರು ಗಮನಿಸದೆ ಇರಬಹುದು. ಆದರೆ ಮುಂದಿನ ಸಲ ಯಾವುದಾದರೂ ಸಭೆಗೆ ಹೋದಾಗ ಅವರು ಇದನ್ನು ಗಮನಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಸಾಮಾನ್ಯವಾಗಿ, ಸಹಜವಾಗಿ ತಾನೇತಾನಾಗಿ, ಗಂಡಸರ ಚಪ್ಪಾಳೆಗೆ ಬಲಗೈ ಸುತ್ತಿಗೆ; ಎಡಗೈ ಅಡಿಗಲ್ಲು! ಆದರೆ ಹೆಂಗಸರ ಚಪ್ಪಾಳೆಗೆ, ಬಲಗೈ ಅಡಿಗಲ್ಲು, ಎಡಗೈ ಸುತ್ತಿಗೆ. ಹೀಗಲ್ಲದೆ ತದ್ ವಿಪರೀತವಾಗಿ ಕಂಡುಬಂದಲ್ಲಿ ಅದು ಆಯಾ ವ್ಯಕ್ತಿಗಳ ನಿಜಸ್ವರೂಪದ ಆಂತರಿಕ ಕುರುಹು. ಅವರನ್ನು ಕೂಡಲೇ ಆಸ್ಪತ್ರೆಗೆ ಸಾಗಿಸುವುದು ಸೂಕ್ತ—ಹೀಗಿರೋಣದರಿಂದ ಆ ಸಭಾ ಮಂದಿರದಲ್ಲಿದ್ದ ವಾಮ ಭಾಗದಿಂದ ಬಂದ ಧ್ವನಿ ಕೊಂಚ ಕಡಿಮೆಯಾಗಿದ್ದದ್ದು ನ್ಯಾಯ. ಆದರೂ ನೂರಾರು ಬಳೆಗಳ ಕಲ ಕಲನಿನಾದದಿಂದ ಅದಕ್ಕೆ ಒಂದು ವಿಶೇಷ ರೀತಿಯ ಕಳೆ ಕೂಡಿತ್ತು.

ಹಂತ ಹತ್ತಿಹೋಗುತ್ತಿದ್ದ ಕಾರ್ಯದರ್ಶಿಯ ಕೈಯಲ್ಲಿನ ಚೀಟಿಯನ್ನೇ ಎಲ್ಲರೂ ಬಿಟ್ಟ ಕಣ್ಣಿಂದ ಅವಲೋಕಿಸುತ್ತಿದ್ದರು. ಹರಕು ಜಮಖಾನೆಯ ತುಂಡೊಂದು ಅವರ ಚಪ್ಪಲಿಗೆ ತಗುಲಿ ಅದನ್ನು ಹಿಂದಕ್ಕೆಳೆದಾಗ, ಇಡೀ ಸಭೆಯ ಎದೆಯಿಂದ 'ಓ' ಎಂಬ ಒಂದು ಬಿಸುಸುಯ್ಲು ಎದ್ದಿತು. ಸದ್ಯಃ, ಕಾರ್ಯದರ್ಶಿ ಅರ್ಧ ಮುಗ್ಗರಿಸಿ ಮುಂದುವರಿದ.

ಚೀಟಿಯನ್ನು ತಂಬೂರಿ ವಿದ್ವಾಂಸನ ಹತ್ತಿರಕ್ಕೆ ತಲಪಿಸಿ ಆತ ಅಲ್ಲೇ ಹಲ್ಲು ಕಿರಿಯುತ್ತಾ ಕೂತ.

ತಂಬೂರಿ ವಿದ್ವಾಂಸನಿಗೆ ಓದು ಬರದು. ಆದರೂ ಅವನು ಅದನ್ನು ನೋಡಿ ಓದು ನಟಿಸಿ, ಮೃದಂಗದವನ ಬೆನ್ನು ಕೆರೆದು ಅವನ ಮಡಲಲ್ಲಿಟ್ಟ. ಮೃದಂಗದವನೂ ಅದನ್ನು ಓದಿಕೊಂಡು ತನಗೆ ತಾನೇ ನಕ್ಕಾಗ, ಸಭಿಕರೆಲ್ಲರಿಗೂ ಕೋಪವೇರಿತು. "ಹಾಳು ಜನ! ಬೇಗ ಅದನ್ನ ಭಾಗವತರ ಕೈಗೆ ಕೊಡಬಾರದೆ? ಮುಂದೆ ಇಂತಹ ಹಾಡು ಹೇಳಿ ಅಂತ ರಾವ್ ಬಹದ್ದೂರ್‌ರವರು ಕೇಳಿದ್ದಾರೆ. ಅದನ್ನ ಅವರಿಗೆ ತೋರಿಸಿದ ತಕ್ಷಣ ಸಂಗೀತಲಹರಿ ಮತ್ತೆ ಪ್ರವಹಿಸುತ್ತದೆ, ಅಂತ ತಾವಿದ್ದರೆ.......... ಎಂದು ಅವರ ಅಸಮಾಧಾನಪಟ್ಟರು. ಕಡೆಗೆ, ಮೃದಂಗದವನಿಂದ ಪಿಟೀಲಿನವನ ಮೂಲಕ ಪಿಟೀಲು ದ್ವಾರಾ ಚೀಟಿ ಸರಿಯಾದ ವಿಳಾಸವನ್ನು ತಲಪಿತು. ಮೃದಂಗದವನೂ, ಪಿಟೀಲಿನವನೂ ತಮಗೆ ತಾವೇ ನಗಲಿಲ್ಲ ಅವರಿಬ್ಬರೂ ಕಾರ್ಯದರ್ಶಿಯವರ ಕಡೆ ನೋಡಿ ವಿಕಾರವಾಗಿ ಹಲ್ಲು ಬಿಟ್ಟರು.

ಚೀಟಿಯನ್ನು ನೋಡಿದ ಕೂಡಲೇ ಭಾಗವತರ ಮುಖದ ಭಾವ ಹೇಗೆ ಮಾರ್ಪಾಟಾಗುತ್ತದೆ ಎಂದು ನೋಡಲು ಎಲ್ಲರೂ ಕುತೂಹಲರಾಗಿದ್ದರು. ಎಲ್ಲರ ಕತ್ತುಗಳೂ ಕೂಡ ಮುಂದೆ ಬಾಗಿ ಶಿರಗಳನ್ನು ಚಾಚಿ ಹಿಡಿದುವು. ಏಕೆಂದರೆ, ಭಾಗವತರ ಮೊದಲನೆಯ ಹಾಡಾದ 'ವಾತಾಪಿ' ಎಂಬ ಗಣಪತಿ ಸ್ತುತಿಯನ್ನು ಅವರು ಆಗಲೇ ಒನ್ಸ್‌ಮೋರ್ ಮಾಡಿಸಿ ಮತ್ತೊಮ್ಮೆ ಹಾಡಿಸಿದ್ದರು. ವಾತಾಪಿಯನ್ನು ಎರಡನೆಯ ಸಲ ಹಾಡಿ ಬೆವರೊರಸಿಕೊಳ್ಳುತ್ತಿರುವಾಗಲೇ ಅದೇ ಮಹಾನುಭಾವರು ಅದೇ ಕಾರ್ಯದರ್ಶಿಯ ಮೂಲಕ ಅಂತಹದೇ ವಿಸಿಟಿಂಗ್ ಕಾರ್ಡಿನ ಮೇಲೆ ಮತ್ತೊಂದು ಪತ್ರ ಬರೆದರೆಂದರೆ ಸಭಿಕರ ಉತ್ಸುಕತೆ ಉಕ್ಕಿದ್ದರಲ್ಲಿ ಆಶ್ಚರ್ಯವೇನಿದೆ? "ಹಾಡಿದ್ದನ್ನೇ ಹಾಡಿಸೋ ಕಿಸೆ ತುಂಬಿದ ಕಾಶಯ್ಯ" ಅಂದ ಹಾಗೆ, ರಾವ್ ಬಹದ್ದೂರ್‌ರವರ ಆಗಿನ ವಿಪರೀತ ವರ್ತನೆಯಿಂದ ಇಡೀ ಸಭೆ ತುದಿಗಾಲಿನ ಮೇಲೆ ನಿಂತು ಕಿವಿ ನೀಡಿ ಕಣ್ಣನ್ನು ಮುಂದಕ್ಕೆ ನೂಕಿತ್ತು.

ಭಾಗವತರು ಚೀಟಿಯನ್ನು ಓದಿ, ಮೃದಂಗದವನನ್ನು ನೋಡಿದರು. ಆತ 'ನನಗೇನು ಗೊತ್ತು?' ಅಂತ ಸಂಜ್ಞೆ ಮಾಡಿದ. ಪಿಟೀಲಿನವನ ಕಡೆ ದೃಷ್ಟಿಯನ್ನು ತಿರುಗಿಸಿದರು, ಆತ 'ನಮ್ಮ ಹಣೆ ಬರಹ' ಎಂಬ ಸಂಜ್ಞೆ ಮಾಡಿದ. ಮೂರು ಜನರೂ ಕಾರ್ಯದರ್ಶಿಯ ಕಡೆ ನೋಡಿದರು. ಆತ ರಾವ್‌ಬಹದ್ದೂರ್ ಕಡೆ ಬೆರಳು ತೋರಿಸಿದ. ಸಭಿಕರ ಕುತೂಹಲ ಇಮ್ಮಡಿಸಿತು. ಭಾಗವತರು ಕಂಠವನ್ನು ಸರಿಪಡಿಸಿದರು. ಮೃದಂಗದವನು ಜುಟ್ಟನ್ನು ಗಂಟಿಸಿದ.

ಹಾಡು ಮೊದಲಾಯಿತು. "ವಾ.... ....ಅ....ಅ....ಅ ತಾ....ಅ ಅ....ಪಿ...." !! ಸಭಿಕರಲ್ಲಿ ಬಹು ಭಾಗದವರು ಕಕ್ಕಾವಾದರು, ಉಳಿದವರು ಬಿಕ್ಕಿಯಾದರು. ಮಹಿಳೆಯರು ಕಿಲಕಿಲ ಪಿಸುಗುಸಿದರು. ಹಿಂದಿನ ಗೋಡೆಯ ಹತ್ತಿರದಿಂದ ಕೋಪಸೂಚಕವಾದ ಕೆಲವು ಧ್ವನಿಗಳೆದ್ದವು.

ಮೂರನೆಯ "ವಾತಾಪಿ" ಮುಗಿಯಿತು. ತಕ್ಷಣವೇ ರಾವ್ ಬಹದ್ದೂರ್

ರವರು ಎದ್ದರು. ಅವರೊಂದಿಗೆ ಅವರ ಪತ್ನಿಯೂ ಸಹಗಮನ ಮಾಡಿದರು.

ಅವರು ಬಾಗಿಲ ಹತ್ತಿರಕ್ಕೆ ಹೋದಾಗ, ಯಾರೋ ಒಬ್ಬರು "ವಾತಾಪಿ ಜೀರ್ಣೋಭವ" ಅಂತ ಕೂಗಿದರು. ಸಭೆಯ ಅಟ್ಟಹಾಸದ ನಡುವೆ ರಾವ್ ಬಹದ್ದೂರ್‌ರವರ ಓಪಲ್‌ಕಾರು ಹೊರಟೇಹೋಯಿತು.

* *

ಮುಟ್ಟಿದ್ದಕ್ಕೆ ಮೂರು ಸಾರಿ ಅಂದ ಹಾಗೆ ಒಂದೇ ಹಾಡನ್ನ ಹೀಗೆ ಮತ್ತೆ ಮತ್ತೆ ಹಾಡಿಸಿದ್ದಕ್ಕೆ ಏನು ಕಾರಣ ಅಂತ ನೀವು ತಿಳಿಯಬೇಕಾದರೆ, ರಾವ್ ಬಹದ್ದೂರ್‌ರವರ ಡ್ರೈವರನ್ನ ಕೇಳಿದರೆ ಸಾಕು. ದಂಪತಿಗಳಿಬ್ಬರೂ ಹಿಂದಿನ ಸೀಟದಲ್ಲಿ ಕುಳಿತು, ಒಬ್ಬರಿಗೊಬ್ಬರು ಪಕ್ಕಚುಚ್ಚಿ ನಕ್ಕರಂತೆ. "ಹತ್ತೆಣಿಸುವುದರೊಳಗಾಗಿ ಮೃದಂಗದವನ ಜುಟ್ಟು ಬಿಚ್ಚಿಹೋಗುತ್ತೆ ಅಂತ ನಾನು ಹೇಳ್ಳಿಲ್ಲವೆ?" ಅಂದಳಂತೆ ಆಕೆ. ಅದಕ್ಕವರು, "ಆದರೆ, ಎರಡನೆಯ ಸಲ ಹಾಡಿಸಿದಾಗ ಅವನ ಜುಟ್ಟು ಹನ್ನೆರಡೆಣಿಸಿದಾಗ ಬಿಚ್ಚಿಹೋಯಿತಲ್ಲ?" ಅಂದರಂತೆ. ಆಗ ಆಕೆ, "ಆಗ ಆತ ಅದನ್ನ ಬಿಗಿಯಾಗಿ ಕಟ್ಟಿದ್ದ ಅದಕ್ಕೇ ನಾನು ಇನ್ನೊಂದು ಸಾರಿ ಹಾಡಿಸಿ ಅಂದದ್ದು" ಅಂದಳಂತೆ. ಆಗ ರಾವ್ ಬಹದ್ದೂರ್‌ರವರು ನಕ್ಕು "ಮೂರನೆಯ ಸಾರಿ ಹಾಡಿಸಿದಾಗ ಒಂಬತ್ತು ಅಂದಾಗ ಬಿಚ್ಚಿಹೋಯಿತು" ಅಂದರಂತೆ. ಆಗ ಆಕೆ, "ಆದ್ದರಿಂದ ನಾನೇ ಗೆದ್ದೆ! ಎಲ್ಲಿ ಈಗಲೇ ಜವುಳಿ ಅಂಗಡಿಗೆ ಹೋಗೋಣ" ಅಂದಳಂತೆ. ಆಗ ಅವರು, "......ನೀನು ಬೇಗ ಬೇಗ ಎಣಿಸಿಬಿಟ್ಟೆ. ಒಂದೇ ಉಸಿರಿನಲ್ಲಿ ಒಂದು ಎರಡು ಮೂರು .....ಅಂತ ಪ್ರಾರಂಭಿಸಿಬಿಟ್ಟೆ" ಅಂದರಂತೆ. ಆಗ ಆಕೆ, "ಎರಡನೆಯ ಸಾರಿ ಹಾಡಿಸಿದಾಗ ನೀವೂ ಅಷ್ಟೆ ....ಐದು ಆರು ಅಂತ ಎಂಡೆರಡು ಸಲ ಅಂದಿರಿ" ಅಂದಳಂತೆ. ಆಗ ಅವರು, "ಸುಮ್ಮನಿರೆ!....ಡ್ರೈವರಿಗೆ ಕೇಳಿಸಬಹುದು......ಆ ಮೇಲೆ ಅವನು ಊರಿಗೆಲ್ಲಾ ಹೇಳಿಬಿಟ್ಟಾನು........ಅಂತು ಆ ಭಾಗವತರು ಬಹಳ ಒಳ್ಳೆಯವರು...... ನಮಗೆ ಬೇಕಾದದ್ದು ಮೃದಂಗದವನ ಜುಟ್ಟಾದರೂ, ಆತ ಒಂದೇ ಹಾಡನ್ನ ಮೂರು ಬಾರಿ ಬೊಗಳಿದನಲ್ಲಾ!" ಅಂದರಂತೆ.

—ನಾ. ಕ.

—o—

ನಜರಾನ ಎಂಬ ಚಿತ್ರವನ್ನು ಮಾರ್ವಾಡಿ ಭಾಷೆಯಲ್ಲಿ ತೆಗೆಯುತ್ತಿದ್ದಾರಂತೆ. ಬೆಂಗಳೂರು ಸೆಕ್ರಟೇರಿಯಟ್ಟಿನ ಅನೇಕ ಗುಮಾಸ್ತೆಯರಿಗೆ ಆ ಭಾಷೆಯ ಪರಿಚಯ್ಯ ವಿರುವುದರಿಂದ ಆ ಚಿತ್ರ ಇಲ್ಲಿಗೂ ಬರಬಹುದು.

* *

ಅನ್ಯಾಯಸ್ಥಾನ ಎಂಬ ಒಂದು ಚಿತ್ರ ತಯಾರಾಗುತ್ತಿದೆಯಂತೆ. ಸದ್ಯಃ ಅದರಲ್ಲಾದರೂ ನ್ಯಾಯಸ್ಥಾನದ ದೃಶ್ಯವಿರುವುದಿಲ್ಲವಲ್ಲಾ!

ನಾನು ನೀರು ತರಿಸಿದ್ದು

ಚಾಮರಾಜಪೇಟೆ ಮುಂತಾದ ರಾಮ ಭಕ್ತ ಭರಿತ ಪುರಪ್ರದೇಶಗಳಲ್ಲಿ, ರಾಮನವಮಿ ಬಂತು ಅಂದರೆ ಸರಿ, ಸಂಗೀತಗಾರರ ಪರದಾಟವೋ ಪರದಾಟ. ಒಂದು ಕಡೆ, ರಾಜೀವ ನಯನತ್ಯಾಗ ಮಾಡಿದ ಕೂಡಲೇ ನಶ್ಯದ ಡಬ್ಬಿಯನ್ನೆತ್ತಿ ಸೊಂಟಕ್ಕೆ ಸಿಕ್ಕಿಸಿಕೊಂಡು ಓಡಾಡುತ್ತಾ, ಪಿಟೀಲು, ಮೃದಂಗದವರ ಸಹಿತವಾಗಿ ಮತ್ತೊಂದೆಡೆಗೆ ಏದುತ್ತಾ ಹೋಗಿ ಅದೇ ಉಸಿರಿನಲ್ಲೇ ವಾತಾಪಿ ಪ್ರಾರಂಭಿಸಬೇಕು. ಈ ಅವಾಂತರದಲ್ಲಿ, ಯಾವುದೋ ಚಪ್ಪರದೊಳಕ್ಕೆ ನುಗ್ಗಿದರೂ ನುಗ್ಗಬಹುದು. ಯಾರದೋ ಪಕ್ಕವಾದ್ಯ ಯಾರ ಪಕ್ಕದಲ್ಲೋ ಕುಳಿತು ಕುಟ್ಟಿಕುಯ್ಯುವ ಸಂಭವ ಬಂದರೂ ಬರಬಹುದು. ಬರೀ ಸಂಗೀತ ಒಂದರಲ್ಲೇ ಇಷ್ಟು ಅನಾಹುತವಾಗುವುದಾದರೆ, ಜೊತೆಗೆ ಉಪನ್ಯಾಸವೂ ಏರ್ಪಾಟಾಗಿದ್ದರೆ, ಕೇಳಬೇಕೆ?

ಮೂರನೇ ಬೀದಿಯಲ್ಲೋ, ಐದನೇ ಬೀದಿಯಲ್ಲೋ, ಜ್ಞಾಪಕವಿಲ್ಲ. ಹಿಂದೆ ಹೀಗೆ ಒಂದು ರಾಮ ಸಪ್ತಾಹ ಏರ್ಪಾಟಾಗಿತ್ತು. ದಿನಕ್ಕೆ ಒಂದು ಉಪನ್ಯಾಸ, ಒಂದು ಸಂಗೀತ, ಒಂದು ಹರಿಕಥೆ. ರಾಮರಸ ತುಂಬಿ ಹರಿದುಬಿಡಬೇಕು, ಎಂಬ ಉತ್ಸಾಹ, ಕಾರ್ಯದರ್ಶಿಗಳಿಗೆ. ಇನ್ನೂ ಹುಡುಗು ಹುಡುಗು, ನಾನೊಬ್ಬ ಪಶು, ಒಂದು ದಿನದ ಬಲಿಗೆ. ಅದರ ಮೂರನೇ ದಿನ ನಾನೂ ಹೋಗಿದ್ದೆ. ಇತರರ ಉಪನ್ಯಾಸಗಳನ್ನು ಕೇಳೋಣ ಅಂತ. ಅಂದಿನ ಯಜ್ಞಕ್ಕೆ, ನರಸಿಂಹಯ್ಯ ಅಂತ ಒಬ್ಬರನ್ನ ಗೊತ್ತುಮಾಡಿದ್ದರು. ಎಲ್ಲರಿಗೂ ಹೊಸಬರು. ಅವರನ್ನು ಸೂಚಿಸಿ ಹೋಗಿ ಕಂಡು ಒಪ್ಪಿಸಿದ ಕಾರ್ಯದರ್ಶಿಗಳಿಗೆ ವಿಪರೀತ ಕಣ್ಣು ನೋವು. ಮನೆಯಲ್ಲಿ ಮಲಗಿ ಚೆರ್ಪಿನ ರುಚಿ ನೋಡುತ್ತಿದ್ದರಂತೆ!

ಏಳೂವರೆ ಆದರೂ ಉಪನ್ಯಾಸಕರು ಬರಲಿಲ್ಲ. ಏಳೂ ಮುಕ್ಕಾಲು, ಎಂಟು ಎಂಟೂಕಾಲಾಯಿತು. ರಾಮನ ಭಂಟರು ಬಸ್ ಸ್ಟ್ಯಾಂಡಿಗೆ ಹೋಗಿ ನಿಂತು, "ನರಸಿಂಹಯ್ಯನವರೇ" ಅಂತ ಕೂಗಿಕೊಂಡು ತಡಕಾಡಿದರು. ಬಸ್ ಸ್ಟ್ಯಾಂಡಿನಿಂದ ಚಪ್ಪರದವರೆಗೂ ಸಾಲಾಗಿ ನಿಂತಿದ್ದ ಸ್ವಯಂಸೇವಕರು, ನೆರೆದಿದ್ದ ಸಭಿಕರಿಗೆ ಸಮಾಚಾರ ತಿಳಿಸುತ್ತಿದ್ದರು—"ದಯವಿಟ್ಟು ಕುಳಿತುಕೊಳ್ಳಿ......ಇನ್ನೇನು ಬಂದುಬಿಡುತ್ತಾರೆ—ಈ ಬಸ್ಸಿನಲ್ಲಿಲ್ಲವಂತೆ, ನರಸಿಂಹರಾವ್ ಅಂತ ಒಬ್ಬರು ಮಾತ್ರ ಇದ್ದರಂತೆ, ಅವರಿಗೆ ಸೂತಕವಂತೆ...... ಇನ್ನೊಂದು ಬಸ್ ಬಂತೂ...... ನರಸಿಂಹಯ್ಯ ಅಂತ ಯಾರೂ ಇಲ್ಲನಂತೆ........ತಾಳೀ ....ಕುಳಿತುಕೊಳ್ಳಿ........ ಉಪನ್ಯಾಸವಾದ ಮೇಲೆ ಸಂಗೀತವಿದೆ.. ....ಆಚೆ ಬೀದಿಯಲ್ಲಿ ಸಂಗೀತ ಮುಗಿಯುತ್ತಲೂ ಮೃದಂಗದವರು ಬರುತ್ತಾರೆ.. ....ಇನ್ನೊಂದು ಬಸ್ಸು ಬಂತು........ ನರಸಿಂಹಯ್ಯನವರು ಬಂದರಂತೆ........ಬಂದರು ......ಕೂತುಕೊಳ್ಳಿ........ಗಲಾಟೆ ಮಾಡಬೇಡಿ.......ಅಂತೂ ಆಸಾಮಿ ಬಂದರಲ್ಲಾ ಅಂತ ನಮಗೆಲ್ಲಾ ಸಂತೋಷ.

ರಾಮನ ಮಹಿಮೆ, ಯಾವುದಕ್ಕೂ ವಿಘ್ನ ಬರುವುದಿಲ್ಲ ಅಂತ ನನ್ನ ಪಕ್ಕದಲ್ಲಿದ್ದವರು ಹೇಳುತ್ತಾ ವಲ್ಲಿಯ ಜರಿಯನ್ನು ನೀವಿದರು. ಸ್ವಯಂ ಸೇವಕರ ತಂಡದ ನಡುವೆ ಆ ದಿನದ ಉಪನ್ಯಾಸಕರು ದರದರನೆ ಬಂದರು—ರಾಮದೇವರ ಪಟದ ಹತ್ತಿರ ನಿಂತರು.

"ಏನು ಮಾಡಬೇಕು ನಾನು?" ಅಂದರು. ಸಹಕಾರ್ಯದರ್ಶಿಗಳು "ಉಪನ್ಯಾಸ" ಅಂದರು. ನಾವುಗಳೆಲ್ಲರೂ ಚಪ್ಪರವನ್ನೇ ಉರುಳಿಸುವಷ್ಟು ಚಪ್ಪಾಳೆ ತಟ್ಟಿದುವು. ಸದ್ದು ನಿಂತ ಮೇಲೆ, ನರಸಿಂಹಯ್ಯನವರು ನಗುನಗುತ್ತಾ, ಸಭಿಕರನ್ನು ನೋಡಿ, "ರಾಮೋತ್ಸವ ನಡೆಸುತ್ತಾ ಇದೀರಿ! ಸಂತರ್ಪಣೇಗೆ ಅಡಿಗೆ ಮಾಡಬೇಕೋ ಏನೋ, ಅದರ ಮಾತು ಏನಾದರೂ ಆಡುತ್ತೀರೋ ಏನೋ, ಅಂತ ನಾನು ಬಂದರೆ.......ಉಪನ್ಯಾಸವಂತೆ ಉಪನ್ಯಾಸ, ನಾನು ಅಡಿಗೆಯವನು" ಎಂದು ಹೇಳಿದರು.



ಆಗ ಅಲ್ಲಿ ಉಂಟಾದ ಅಲ್ಲೋಲಕಲ್ಲೋಲದ ನಡುವೆ ಅಡಿಗೆ ನರಸಿಂಹಯ್ಯನವರನ್ನು ಸ್ವಯಂ ಸೇವಕರು ಚಪ್ಪರದಾಚೆ ಸಾಗಿಸಿಬಿಟ್ಟಿದ್ದರು. ಕಣ್ಣು ನೋವಿನ ಕಾರ್ಯದರ್ಶಿಗಳನ್ನೂ ಯಾರೋ ಎಳೆಯ ತಂದರು. "ಉಪನ್ಯಾಸಕರು ಬರಲಿಲ್ಲ

ವಲ್ರೀ" ಅಂತ ಅನೇಕರು ಕೂಗಿಕೊಂಡರು. ಆಗ ಅವರು, ನನ್ನ ಹತ್ತಿರವಿದ್ದ ಒಂದು ಕಂಬಕ್ಕೇ ಒರಗಿಕೊಂಡಿದ್ದರು. ಅವರು, ನನ್ನ ಕಡೆ ದುರದುರನೆ ನೋಡಿದರು. "ಉಪನ್ಯಾಸಕರು" ಇಲ್ಲೀ ಇದಾರಲ್ಲಾ!" ಅಂದರು. ಹೌದು! ನನ್ನ ಹೆಸರೂ ಕೂಡ, ನರಸಿಂಹಯ್ಯ ಅಂತ! "ನನ್ನ ಸೇವೆ ನಿನ್ನೇನೇ ಆಯಿತಲ್ಲಾ" ಅಂದೆ. "ಎರಡು ದಿನಾಂತ ನಾನು ನಿಮಗೆ ಹೇಳಿದ್ದೆನಲ್ಲಾ" ಅಂದರು. "ಇಲ್ಲ" ಅಂದೆ—"ಉಂಟು" ಅಂದರು. "ಇಲ್ಲವೇ ಇಲ್ಲ" ಅಂದೆ. "ಮರೆತಿರಬಹುದು ತಾವು" ಅಂದರು—ಜನರು ಕೂಗಿಕೊಂಡರು "ಪ್ರಾರಂಭಮಾಡೀ" ಅಂತ ಚಪ್ಪಾಳೆ ಹೊಡೆದರು—ನಿಲ್ಲಿಸಲೇ ಇಲ್ಲ.

ನಾನು ಎದ್ದೆ. "ಕೊಂಚ ನೀರು ತರಿಸಿ" ಅಂದೆ.

—o—

ನವೀನ ಗಾದೆಗಳು

(ಹೂವಿನವರದು)

ವಿನಾಯಕನ ಮುಡುಪೆ ಎಂದರೆ—ಗರುಕೇನೂ ಹೂವಾಗೋದೇ?

*   *

ರೋಜಾಬಾಯಿ ಎಂದಾಕ್ಷಣವೇ—ನಾಲಿಗೆಯೆಲ್ಲಾ ಮುಳ್ಳಾಗಬೇಕೆ?

*   *

ಪೂವಿನ ಜತೆಗೆ ನಾರೀನೂ ಸ್ವರ್ಗಕ್ಕೇರಿದಳು.

*   *

ತುಂಬೇ ಹೂವಿನ ದೇವರಿಗೆ—ಅಂಬಲೀನೇ ಅಭಿಷೇಕ.

*   *

ಕೆಂಡ ಸಂಪಿಗೆ ಮುಡಿದಾಕೆಗೆ—ಕೆಂಡದಂಥಾ ಕೋಪ.

*   *

ಹೆಣ್ಣು ಮಕ್ಕಳು ಚೆನ್ನಿಸ್ಯಾಡಿದರೆ ನೋಡಿ,—ನಡದಲ್ಲೆಲ್ಲಾ ಮಲ್ಲಿಗೆ ಮೊಗ್ಗೇ!

*   *

ಹೂವೂ ಚೆನ್ನು—ಕಣ್ಣೂ ಚೆನ್ನು—ಆದರೆ ಕಣ್ಣಲ್ಲಿ ಹೂ ಚೆನ್ನೆ?

*   *

ಹೂ ಮುಡಿಯಲಾರದವರು—ಹೂಬತ್ತಿ ಮಾಡಲು ಶುರು.

—o—

"ಮುಂದಿನ ಯುದ್ಧ"

(ಆಗಂತುಕರಿಬ್ಬರ ವಾದ ಸಂವಾದ)

"ಮುಂದಿನ ಯುದ್ಧದಲ್ಲಿ ನೋಡು"

"ಮುಂದಿನ ಯುದ್ಧ! ಇದೇ ಇನ್ನೂ ಮುಗಿದಿಲ್ಲವಲ್ಲಾ. ಮೊನ್ನೆ ತಾನೇ ನಾಸ್ತಿ ಮೂರ್ತಿ ಅಮೆರಿ ಹೇಳಲಿಲ್ಲವೇ, ಇನ್ನೂ ಹಲವು ವರ್ಷ ಈ ಯುದ್ಧ ಆಗುತ್ತದೆಯೆಂದು."

"ಈ ಯುದ್ಧ ನಡೆಯುಬಹುದು ಇನ್ನೂ ಕೆಲವು ವರ್ಷ. ಆದರೆ ಈ ಯುದ್ಧದ ವಿಚಾರ ಬರೆಯುವವರಿಗೆಲ್ಲಾ ಈ ಯುದ್ಧವು ಮುಗಿದಂತೆಯೇ—ಬರೆಯದೆ ಇರುವ ವರಲ್ಲಿ ಚೂಟಿಯಾದವರೆಲ್ಲಾ ಸರಬರಾಜು ಶಾಖೆಯಲ್ಲಿ ಹುದ್ದೆಗಳನ್ನಾಗಲೇ ಸಂಪಾದಿಸಿಬಿಟ್ಟಿದ್ದಾರೆ. ಹಾಗಾಗಿ ನನ್ನಂತಹವರಿಗೆ ಮುಂದಿನ ಯುದ್ಧವೇ ಗತಿ"

"ಸರಿಯಯ್ಯಾ! ಈ ಯುದ್ಧ ಮುಗಿದ ಮೇಲೆ ಶಾಂತಿ ಕಾಲದಲ್ಲಿ ನಿನಗೆ ಒಳ್ಳೆಯ ಕಾಲ ಬರುವುದಿಲ್ಲವೇ?"

"ಛೇ, ಛೇ, ಎಲ್ಲಿ ಬಂತು? ಈಗಾಗಲೇ ಸಮರ ಸರಬರಾಜು, ಸಮರ ಸಾಹಿತ್ಯ ಇವುಗಳಲ್ಲಿ ಹಣಮಾಡದೆ ಇರುವವರೆಲ್ಲಾ ಶಾಂತಿ ರಚನೆ, ಪುಷ್ಟಿ ರಚನೆ, ತುಷ್ಟಿ ರಚನೆ, ಭಾವೀ ಪ್ರಪಂಚ ರಚನೆ ಇದರಲ್ಲಿ ಮಗ್ನರಾಗಿ, ಮೊಳದುದ್ದ ಬಹಿರಂಗ ಪತ್ರಗಳನ್ನು, ದೈನಂದಿನ ಪತ್ರಿಕೆಗಳಲ್ಲೆಲ್ಲಾ ಪ್ರಕಟಿಸುತ್ತಿಲ್ಲವೇ?"

"ಅಂದರೆ ಮುಂದಿನ ಯುದ್ಧ ನಿನ್ನ ಮನಸ್ಸಿನಲ್ಲಿ ಯಾವಾಗ ಎಂದು?"

"ಅದೇ ಹೇಳುತ್ತಿದ್ದೆ, ಆದರೆ ಈಗ ನಾಲ್ಕು ಗಂಟೆಯಾಗಿಯೇ ಹೋಯ್ತು, ನಾನು ಬಹಿರಂಗ ಸಭೆಯೊಂದಕ್ಕೆ ಹೋಗಬೇಕು. ಅಲ್ಲಿ ಸರಕಾರದವರ ಹೊಸ ಕಾನೂನೊಂದನ್ನು ನಿರೋಧಿಸುವರಂತೆ, ಸುಪ್ರಸಿದ್ಧ ಸಾಹಿತಿಯೆಂದು ನನಗೂ ಆಹ್ವಾನ ಬಂದಿದೆ. ನಾನೂ ಭಾಷಣ ಮಾಡುತ್ತೇನೆ, ಹೊತ್ತಾಯಿತು."

"ಯಾವ ಕಾನೂನನ್ನು ವಿರೋಧಿಸಿ ಭಾಷಣ ಇವತ್ತು?"

"ಅದು ಚೆನ್ನಾಗಿ ಗೊತ್ತಿಲ್ಲ. ಆದರೆ, ಈಗಿನ ಸರಕಾರದಲ್ಲಿ ಯಾವ ಕಾನೂನು ಮಾಡಿದರೂ ಧೈರ್ಯವಾಗಿ ವಿರೋಧಿಸಬಹುದು. ಅಲ್ಲದೆ, ಈ ಕಾನೂನು ತಂದಿರುವ ಮಂತ್ರಿ ನನಗೆ ಗೊತ್ತು. ಅವನೇ ನನ್ನ ಕೆಲಸಕ್ಕೆ ಕಲ್ಲು ಹಾಕಿದುದು."

"ಕಾನೂನು ಗೊತ್ತಿಲ್ಲದೆ ವಿರೋಧ ಭಾಷಣ ಹೇಗೆ ಮಾಡುತ್ತೀಯೆ?"

"ಅದೇನು ಕಷ್ಟ. ಸಾಮೂಹಿಕ, ಸಾರ್ವತ್ರಿಕ, ಸಮಾಜ ಸುಖವನ್ನೇ ಮಟ ಹಾಕಲು ಈ ಕಾನೂನು ಎತ್ತಿದ ಕೈ, ಬಿಚ್ಚಿದ ಕತ್ತಿಯಂತಿದೆ. ಇದನ್ನು ಜಾರಿಗೆ ತರಲಿರುವ ಅಧಿಕಾರಿಗಳು ಮಾನ್ಯ ಅಧಿಕಾರಿಗಳಿಗೆ ಜವಾಬ್ದಾರಿಯೇ ಇಲ್ಲ.

ಇದ್ದವರಾರೂ ಹೀಗೆ ಮಾಡರು ಎಂದು ಭಾಷಣ ಆರಂಭಿಸಿ ಅದೇ ಧಾಟಿಯಲ್ಲಿ ಮುಗಿಸುತ್ತೇನೆ. ಕರತಾಡನಗಳು ಖಂಡಿತ. ಏಕೆಂದರೆ, ಜನ ಸಮುದಾಯದಲ್ಲಿ ಎಲ್ಲರಿಗೂ ಅಧಿಕಾರಿಗಳನ್ನು ಕಂಡರೆ ಹೊಟ್ಟೆಕಿಚ್ಚು. ಅದನ್ನೇ ಎತ್ತಿ ಹಾಕಿದರೆ ಭಾಷಣ ಸುಲಭ. ಇದಕ್ಕೆ ಯಾವ ಕಾನೂನಾದರೇನು."

"ಈ ವಿರೋಧ ಸಭೆಗೆ ಅಧ್ಯಕ್ಷರಾರು?"

"ಯಾರಾದರೇನು, ಪ್ರಸ್ತುತ, ಶ್ರೀ ಅಂಬುಜರಾಯರೇನೇ ಅಧ್ಯಕ್ಷರು. ಅವನ ಕಡೆಯ ಪುಸ್ತಕ ಚೆನ್ನಾಗಿ ಮಾರಾಟವಾದಾಗಿನಿಂದ ಆತನು ನಮ್ಮನ್ನೆಲ್ಲ ಕ್ಷೀಣವಾಗಿ ಕಾಣುತ್ತಾನೆ. ಅವನ ಮಾತುಗಳನ್ನೇ ಎತ್ತಿ ಅವನ ಕೀಳ್ತನಗತಿಯ ಬುದ್ಧಿಯನ್ನು ಸಭೆಯೆದುರಿಗೆ ತೋರಿಸಿದರೆ, ನನ್ನ ಗೌರವ ಸ್ವಲ್ಪವಾದರೂ ಉಳಿಯುತ್ತಲ್ಲವೇ?"

"ನೀವು ನೀವೇ ಜಗಳವಾಡಿದರೆ, ಕಾನೂನನ್ನು ವಿರೋಧಿಸಿದ ಹಾಗಾಯ್ತೆ?"

"ಅಯ್ಯೋ ಮಂಕೆ, ನಾವು ಸಭೆಯಲ್ಲಿ ಹೇಗೆ ಮಾತನಾಡಿದರೇನು? ಯಾರನ್ನು ಯಾರು ಬೈದರೇನು? ಎಷ್ಟು ಜನ ಬಂದಿದ್ದರೇನು? ದೈನಂದಿನ ಪತ್ರಿಕೆಗಳಲ್ಲಿ ಈ ಸುದ್ದಿಯನ್ನು ಸಾವಧಾನವಾಗಿ, ಸಾಲಕ್ಷಣವಾಗಿ, ಸಾಲಂಕೃತವಾಗಿ ಹಾಕಿಯೇ ಹಾಕುತ್ತಾರೆ. ಅಲ್ಲದೆ ಪತ್ರಿಕಾ ಬಾತ್ಮೀದಾರನಿಗೆ ನನ್ನ ಭಾಷಣದ ಸಾರಾಂಶವೊಂದನ್ನು ಆಗಲೇ ಕಳುಹಿಸಿದ್ದೇನೆ. ಅವನು ನನ್ನ ಸ್ನೇಹಿತ."

"ಸರಕಾರದವರ ಕಡೆಯವರಾದರೂ ಸಭೆಗೆ ಬಂದಿದ್ದರೆ ಅವರಿಗೆ ಈ ಗುಟ್ಟು ತಿಳಿದುಹೋಗುತ್ತದಲ್ಲ!"

"ಛೇ, ಸರಕಾರದ ಕಡೆಯವರು ಈ ಭಾಷಣಗಳನ್ನು ಕೇಳಲೆಂದು ನಿಯಮಿತರಾದವರು, ಅಲ್ಲೇ ಹೋಟಲುಗಳಲ್ಲಿ, ಬಿಟ್ಟಿ ತಿಂಡಿ ತಿನ್ನುತ್ತಾ ಇರುವರೇ ಹೊರತು, ಈ ಮಳೆ ಗಾಳಿಯಲ್ಲಿ ಬಹಿರಂಗ ಸಭೆಗೆ ಬಂದು, ಛಳಿಯಲ್ಲಿ ಗಡಗಡ ಎಂದು ನಿಲ್ಲುವರೇ? ಎಂದಿಗೂ ಇಲ್ಲ."

"ಇದರಿಂದಾದರೂ ಏನು ಪ್ರಯೋಜನ?"

"ಪ್ರಯೋಜನಾ! ಪ್ರಯೋಜನವೇನು, ಯಾವುದರಿಂದ ತಾನೇ ಪ್ರಯೋಜನ? ಈ ಯುದ್ಧದಿಂದ ಏನು ಪ್ರಯೋಜನ? ಈ ಶಾಂತಿಯಿಂದಾದರೂ ಏನು ಪ್ರಯೋಜನ? ಎಂದಿಗೂ ತೋಳ ತನ್ನ ಚೌರ್ಯ ನಡೆಸುತ್ತಲೇ ಇರುತ್ತೆ, ನಮ್ಮಂತಹ ಕುರಿಗಳು ಸಾಯುತ್ತಲೇ ಇರುತ್ತೇವೆ. ಇರುವ ತನಕ ಸ್ವಲ್ಪ ಗಲಾಟೆ ಮಾಡಿ, ಆದಷ್ಟು ಹೊತ್ತು ತೋಳ ದೂರ ಇರುವಂತೆ ಮಾಡುವುದೇ ಪ್ರಯೋಜನ"

"ಮತ್ತೆ ಮುಂದಿನ ಯುದ್ಧ ಅಂದೆಯಲ್ಲಾ ಅದಕ್ಕೂ ಇದಕ್ಕೂ ಏನು ಸಂಬಂಧ!"

"ನೋಡು, ಈ ಯುದ್ಧದಲ್ಲಿ ಸುಖವಾದ ಕೆಲಸವಾಗಲೀ, ಇನ್ನೂ ಸುಖವಾದ ಸರಬರಾಜು ಕೆಲಸವಾಗಲಿ ಯಾವುದೂ ಸಿಗಲಿಲ್ಲ. ಮುಂದೆ ಎಂದಾದರೂ ಬರುವ ಶಾಂತಿ ಕಾಲದಲ್ಲಿ ಹಣವಿಲ್ಲದ ಕಾರಣ ನಾನೇನು ಸುಖವಾಗಿರುವ ಹಾಗಿಲ್ಲ. ಈಗಿನಿಂದ ಈ ಧಾಂದಲೆ ಅಭ್ಯಾಸ ಮಾಡಿದರೆ, ಶಾಂತಿ ಕಾಲದಲ್ಲಿ ದೇಶವನ್ನೇ ದೇಶದ ಮೇಲೆ ಬೀಳುವ ಹಾಗೆ ಮಾಡಿದರೆ, ಇನ್ನೊಂದು ಯುದ್ಧ ಸಿದ್ಧ. ಆ ವೇಳೆಗೆ ನಾನೂ ದೊಡ್ಡ ಬಾಯಿನವನಾಗಿರುತ್ತೇನೆ. ಅಂದ ಮೇಲೆ, ಮುಂದಿನ ಯುದ್ಧದಲ್ಲಿ ಹಣವನ್ನು ಹೇರಳವಾಗಿ ಬೊಗಸೆ ಬೊಗಸೆ ಸಂಪಾದಿಸಬಹುದು."

"ದೇಶದ ಮೇಲೆ ದೇಶ ಬಿದ್ದರೆ ಎಂದರೆ?"

"ಅಯ್ಯೋ ಪೆಚ್ಚೆ, ಈಗಾಗಲೇ ನೋಡು, ನಮ್ಮದೇಶ ಒಂದರಲ್ಲೇ ಮೂರು ದೇಶಗಳಾಗಬೇಕೆಂದು ಗೊಂದಲ ಹೊರಟಿದೆ. ನನ್ನಂತೆಯೇ ಈ ಯುದ್ಧ, ಶಾಂತಿಯಲ್ಲಿ, ಅನುಕೂಲ ಹೊಂದದೆ ಇರುವವರೇ ಈ ಉಪಾಯವನ್ನು ಹೂಡಿರುವರು, ಅವರಿಗೇ ಮರೆಯಲ್ಲೇ ಬೆಂಬಲ ಕೊಟ್ಟು, ಅವರ ಅನುಯಾಯಿಗಳು ಒಬ್ಬರ ಮೇಲೊಬ್ಬರು ಬೀಳುವಂತೆ ಮಾಡಿದರೆ, ಇನ್ನೊಂದು ಯುದ್ಧ ಆಗುವುದರಲ್ಲಿ ಏನು ಕಷ್ಟ."

"ನಮ್ಮ ದೇಶದಲ್ಲಿ ಯುದ್ಧ ಹೇಗೆ ಸಾಧ್ಯ"

"ಮಂಕೇ, ಇದನ್ನೂ ಹೇಳಬೇಕೆ? ಆ ವೇಳೆಗೆ ಪರದೇಶಗಳಲ್ಲಿ ಯುದ್ಧ ಮುಗಿದಿರುತ್ತೆ. ಅವರುಗಳಿಗೆಲ್ಲಾ ಬಡತನ ಹೆಚ್ಚು. ಬರೀ, ಗುಂಡು, ಕೋವಿ, ಫಿರಂಗಿಗಳೇ ಆಸ್ತಿ. ಅವರು ಧನಿಕರಾಗಲು ಏನು ಮಾಡಬೇಕು? ನಮ್ಮ ದೇಶಕ್ಕೇ ಇವುಗಳನ್ನೆಲ್ಲಾ ತಂದು ಮಾರಿ ನಮ್ಮ ದವಸ ಧಾನ್ಯ ತೊಗೊಂಡು ಹೋಗಬೇಕು. ಗುಂಡು ಕೋವಿ ಇಟ್ಟುಕೊಂಡು ನಮ್ಮ ದೇಶದವರು ತಾನೇ ಏನು ಮಾಡುತ್ತಾರೆ? ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಅಳುತ್ತಾರೆಯೇ? ಕೋವಿ ಇಟ್ಟುಕೊಂಡು ಶಾಂತಿ ಸಂಧಾನವೇ? ಕೈ ಕೈ, ಕೋವಿ ಕೋವಿ ಮಿಲಾಖತ್ತು ಆಗಿಯೇ ಆಗುತ್ತೆ, ನಾನು ಬದುಕಿಯೇ ಬಿಡುತ್ತೇನೆ!"

"ನೀನು ಬಲು ದೂರ ದರ್ಶಿಕಣಯ್ಯಾ, ಈ ಮಧ್ಯೆ ಈ ಸಮರದ ಬರದಲ್ಲೇ ನೀನು ಮರಣ ಹೊಂದಿದರೆ"

"ಆ ಮೇಲೆ ನನಗೇನು ಯೋಚನೆ, ಸ್ವರ್ಗದಲ್ಲೋ ಅದಕ್ಕಿಂತ ನರಕದಲ್ಲೋ ಸುಖವಾಗಿ ಗೊಂದಲ ಹಚ್ಚಲು ಶುರು ಮಾಡುತ್ತೇನೆ"

"ಸರೀಪ್ಪ ಹೊರಡು, ನಿನ್ನ ಬಹಿರಂಗ ವಿರೋಧ ಸಭೆಗೆ ಹೊತ್ತಾಯ್ತು."

(ಇಬ್ಬರೂ ನಿಷ್ಕ್ರಮಣ)

ನಿಮ್ಮ ಪ್ರಶ್ನೆಗೆ—ನಮ್ಮ ಉತ್ತರ

ಅಮಿಲ್‌ದಾರ್ ಅಂದರೆ ಯಾರು ?
—ಆಡಳಿತದ ಅಡಿಗಲ್ಲು.

ಮಾಮೂಲು ಅಂದರೆ ಏನು ?
—ಹಾಗೆ ಕೇಳುವ ಹಾಗೆಯೇ ಇಲ್ಲ; ಕೊಟ್ಟೇಬಿಡಬೇಕು.

ಮೈಸೂರಿಗೆ ರಾಸಿ ರಾಸಿಯಾಗಿ ಆಮದಾಗುವ ಪದಾರ್ಥವೇನು ?
—ಹೆದರಿದ ಮದರಾಸಿಗಳು.
ರಫ್ತಾಗುವುದು ?
—ಪ್ರಿರ್ಜಿ ಅಧಿಕಾರಿಗಳು.

ಸಂಸ್ಥಾನದ ಪ್ರಜೆಗಳಲ್ಲಿ ಮುಖ್ಯ ದೇಶ ಸೇವಕರು ಯಾರು ?
—ಕುಡುಕರು.
ಯಾಕೆ ?
—ಆದಾಯದಲ್ಲಿ ಆರರಲ್ಲೊಂದು ಭಾಗ ಅವರ ಕಿಸೆಯಿಂದಲೇ.

ಬೆಂಗಳೂರಿನಲ್ಲಿರುವವರ ಮುಖ್ಯ ಕಸಬೇನು ?
—ಬಸ್ಸಿಗೆ ಕಾಯುವುದು.
ಸಂಸ್ಥಾನದ ಹಳ್ಳಿಯವರದು ?
—ಸೀಮೆ ಎಣ್ಣೆ ಕೊಂಡುಕೊಳ್ಳುವುದು.


"ಕನ್ನಡ" ಎಂಬ ಹೆಸರು ಏಕೆ ಬಂತು ?
—'ಕರ್ನಾಟಕ'ವೋ 'ಕರ್ಣಾಟಕ'ವೋ ಎಂದು ಗೊತ್ತಾಗದೇ ಇದ್ದುದರಿಂದ.

ಸಂಸ್ಥಾನದ ಪ್ರಜೆಗಳು ಮುಖ್ಯವಾಗಿ ಮಾತನಾಡುವುದು ಯಾವುದು ?
—ಪದಾರ್ಥಗಳ ಬೆಲೆ ಏರಿರುವ ವಿಷಯ.


ದಬ್ಬಾಳಿಕೆಯನ್ನು ನೋಡಿದಿರಾ ?
—ನೋಡಿದೇನೆ.
ಯಾವಾಗ ?
—ಮೊನ್ನೆ.
ಎಲ್ಲಿ ?
ಮೂರು ಜನ ಒಂದು ಕಾರನ್ನು ದಬ್ಬುತ್ತಿದ್ದಾಗ.

—o—

ಮಣ್ಯಂ ಕಂಪನಿಯವರ ತಯಾರಿಕೆಗಳು



ಮಣ್ಯಂ ಕಂಪನಿಯವರ ಸ್ನೋ, ಹೇರ್ ಆಯಿಲ್ ಮತ್ತು ಸೋಪ್ ಕರ್ನಾಟಕದಲ್ಲೆಲ್ಲ ಪ್ರಸಿದ್ಧಿ ಪಡೆದಿವೆ. ಅನೇಕ ವಸ್ತು ಪ್ರದರ್ಶನಗಳಲ್ಲಿ ಪ್ರಶಸ್ತಿಗಳನ್ನು ಪಡೆದಿವೆ. ಸೌಂದರ್ಯೋಪಕರಣಗಳಲ್ಲಿ ಇವಕ್ಕೆ ಮಿಗಿಲೆನಿಸುವವು ಬೇರೆ ಯಾವುವೂ ಇಲ್ಲ ಎನಿಸಿಕೊಂಡಿವೆ. ಒಂದು ಸಾರಿ ಪರೀಕ್ಷಿಸಿ ನೋಡಿ, ತಾನೇ ತಿಳಿಯುತ್ತೆ!!



ಮಣ್ಯಂ ಅಂಡ್ ಕಂಪನಿ, ಮದ್ರಾಸು



ಲೋಧ್ರ — ಗರ್ಭಾಶಯ ಟಾನಿಕ್

ಅಕ್ರಮ ಮುಟ್ಟು, ಬಂಜೆತನ, ಗರ್ಭಜವಾಯು, ನಿದ್ರಾಭಂಗ, ಅಜೀರ್ಣ, ಮಲಬದ್ಧತೆ, ಕೆಮ್ಮು, ತಲೆನೋವು, ಬೆನ್ನುನೋವು ಮುಂತಾದುವನ್ನು ನಾಶಮಾಡುವುದು

ಅಕರ್ಕ — ಶ್ರೇಷ್ಠ ಜ್ವರ ನಿವಾರಿಣಿ

ಇನ್‌ಫ್ಲೂಯಂಜಾ, ಟೈಫಾಯಿಡ್, ಮಲೇರಿಯ ಮುಂತಾದ ಎಲ್ಲಾ ವಿಧವಾದ ಜ್ವರಗಳನ್ನೂ, ಪ್ಲೀಹ ಮತ್ತು ಪಿತ್ತಕೋಶ ರೋಗಗಳನ್ನೂ ಗುಣಪಡಿಸುವುದು.

ಅಮೃತ — ರಕ್ತಶುದ್ಧಿ ಟಾನಿಕ್

ಎನೀಮಿಯ, ಮಲಬದ್ಧತೆ, ಅಜೀರ್ಣ, ನಿಶ್ಶಕ್ತಿ, ಬುದ್ಧಿಮಾಂದ್ಯ, ಎದೆಯ ನಿಶ್ಶಕ್ತಿ, ಜ್ಞಾಪಕಶಕ್ತಿ ಇಲ್ಲದಿರುವದು, ದೃಷ್ಟಿಮಾಂದ್ಯ, ತಲೆ ತಿರುಗುವುದು, ಚರ್ಮ ರೋಗಗಳು ಮುಂತಾದುವನ್ನು ನಾಶಮಾಡುವುದು.

ಏಜಂಟರು :


ಸಿಟಿ ಮೆಡಿಕಲ್ ಅಂಡ್ ಜನರಲ್ ಏಜನ್ಸಿ,

ಚಿಕ್ಕಪೇಟೆ, : : : ಬೆಂಗಳೂರು ಸಿಟಿ.

ವಿಜಯ ಪಿಕ್ಚರ್ಸ್ ಅವರ ಚಿತ್ರಗಳು

—

ಏಷ್ಯಾಟಿಕ್ ಪಿಕ್ಚರ್ಸ್‌ರವರ ಚಿತ್ರರತ್ನ



'ಯಾದ್' ಚಿತ್ರದಲ್ಲಿ 'ವೀಣಾ'

ಮೋಹನ್ ಪಿಕ್ಚರ್ಸ್ ಅವರ
ಜನಾದರಣೀಯವಾದ ಚಿತ್ರಗಳು

—

ತಾಜ್ ಮಹಲ

ಕುಮಾರ್, ಸರೋಜಿನಿ, ಇಂದುರಾಣಿ
ಮುಬಾರಕ್

●

ಷಹಜಾದಿ

ಮಾಯಾಬಾನರ್ಜಿ, ಪ್ರಮಿಳಾ,
ನವೀನಚಂದ್ರ, ತ್ರಿಲೋಕ ಕಪೂರ್

●

ಮುಸ್ಲಿಂ-ಕೆ-ಲಾಲ್

ಕಲ್ಯಾಣಿ, ಅಮಿನಾ, ಅನಿಲಕುಮಾರ್

●

ಬುಲ್‌ಬುಲ್-ಇ-ಬಾಗ್ದಾದ್

ಇಂದುರಾಣಿ-ಯಾಕೂಬ್, ಜಯಂತ್

●

ಇತರ ವಿವರಗಳಿಗೆ:

ವಿಜಯ ಪಿಕ್ಚರ್ಸ್

ಚಿಕ್ಕಪೇಟೆ, : : ಬೆಂಗಳೂರು ಸಿಟಿ

— ಇವರಿಗೆ ಬರೆಯಿರಿ —

Pridted by B. S. Iyengar, Bangalore City.—Publisher—B. N. Gupta
Editor. M. SHIVARAM.